ಜಯಉ ಸುಯದೇವದಾ

ಶ್ರುತಸ್ವರೂಪ

ಅರಹಂತಭಾಸಿಯತ್ಥಂ ಗಣಧರದೇವೇಹಿಗಂಥಿಯಂ ಸಮ್ಮಂ।

ಪಣಮಾಮಿ ಭತ್ತಿಜುತ್ತೋ ಸುದಣಾಣಮಹೋದಹಿಂ ಸಿರಸಾ॥

ಅರ್ಹದ್ವಕ್ತ್ರಪ್ರಸೂತಂ ಗಣಧರರಚಿತಂ ದ್ವಾದಶಾಂಗಂ ವಿಶಾಲಂ।

ಚಿತ್ರಂ ಬಹ್ವರ್ಥಯುಕ್ತಂ ಮುನಿಗನವೃಷಭೈರ್ಧಾರಿತಂ ಬುದ್ಧಿ ಮದ್ಭಿಃ।

ಮೋಕ್ಷಾಗ್ರದ್ವಾರಭೂತಂ ವ್ರತಚರಣಫಲಂ ಜ್ಞೇಯಭಾವಪ್ರದೀಪಂ।

ಭಕ್ತ್ಯಾ ನಿತ್ಯಂ ಪ್ರವಂದೇ ಶ್ರುತಮಹಮಖಿಲಂ ಸರ್ವಲೋಕೈಕಸಾರಂ ॥

ತಿಳಿವಳಿಕೆ–ಜ್ಞಾನ ಪ್ರಾಣಿಯ ಮುಖ್ಯ ಲಕ್ಷಣ. ಪ್ರಾಣಿ ಪ್ರಾಣಿ ಮಧ್ಯೆ ಈ ತಿಳಿಯುವ ಶಕ್ತಿಯಲ್ಲಿತರ–ತಮಭಾವವಿದೆ. ಪ್ರಾಣಿವರ್ಗದಲ್ಲಿ ಅತ್ಯುನ್ನತಸ್ಥಾನದಲ್ಲಿರುವ ಮನುಷ್ಯನು ಇತರ ಪ್ರಾಣಿಗಳ್ ಅಪೇಕ್ಷೆಯಿಂದ ಅತ್ಯಂತ ಹೆಚ್ಚಿನದಾದ ತಿಳಿವಳಿಕೆ ಶಕ್ತಿ ಹೊಂದಿದ್ದಾನೆ. ಹೀಗೆ ತಿಳಿಯುವ ಶಕ್ತಿಯಲ್ಲಿ ಕಂಡುಬರುವ ತರತಮಭಾವಕ್ಕೆ ಜೈನ ಸಿದ್ಧಾಂತದಲ್ಲಿ ಅದರದೇ ಆದ ವಿಶಿಷ್ಟ ವಿವರಣೆ ಇದೆ. ಇದರಂತೆ ಪ್ರತಿಯೊಂದು ಪ್ರಾಣಿಯೂ ಅದರ ಶರೀರದಿಂದ ಭಿನ್ನ ಲಕ್ಷಣ ಹೊಂದಿರುವ 'ಜೀವ' ಉಳ್ಳದ್ದಾಗಿದೆ. 'ಆತ್ಮ' ಎಂಬುದು ಜಿವದ ಮತ್ತೊಂದು ಹೆಸರು. ಚೈತನ್ಯ ಜೀವದ ಪ್ರಧಾನ ಲಕ್ಷಣ.

ಉಪಯೋಗದ ಅಪೇಕ್ಷೆಯಿಂ;ದ ಚೈತನ್ಯವು ದರ್ಶನ ಮತ್ತು ಜ್ಞಾನ ಎಂಬ ಎರಡು ಪ್ರಕಾರಗಳುಳ್ಳದ್ದಾಗಿದೆ. ಅನಾಕಾರ ಉಪಯೋಗವು ದರ್ಶನ ಮತ್ತು ಸಾಕಾರ ಉಪಯೋಗವು ಜ್ಞಾನ.೧

ಜೀವನು ಅನಾದಿಕಾಲದಿಂದ ಕರ್ಮಬದ್ಧನಾಗಿದ್ದಾನೆ. ಇದರಿಂದ ಅವನ ಸಹಜವಾದ ಜ್ಞಾನ, ದರ್ಶನ ಮುಂತಾದ ಗಣಗಳು ಕುಂಠಿತವಾಗಿದ್ದು ಅಬಾಧಿತ ರೀತಿಯಿಂದ ಪೂರ್ಣವಾಗಿ ವಿಕಾಸ ಹೊಂದದಂತಾಗಿವೆ. ಪೂರ್ಣವಾಗಿ ಪ್ರಕಟವಾಗದಂತಾಗಿವೆ. ಈ ಸ್ಥಿತಿಯಲ್ಲಿ ಅವನು ಪುಣ್ಯ ಪಾಪಕರ್ಮವಶನಾಗಿ ದೇವ, ಮನುಷ್ಯ, ತಿರ್ಯಂಚ ಮತ್ತು ನರಕ ಎಂಬ ನಾಲ್ಕು ಗತಿಗಳಲ್ಲಿ ಪರಿಭ್ರಮಣೆ ಮಾಡುತ್ತಿರುತ್ತಾನೆ. ಈ ಸ್ಥಿತಿಯಲ್ಲಿರುವವನು ಸಂಸಾರಿ ಜೀವ. ಈ ಕರ್ಮಗಳಿಂದ ಬಿಡುಗಡೆ ಹೊಂದಿದ ಜೀವನು ಸಿದ್ಧ ಜೀವ ಅಥವಾ ಮುಕ್ತ ಜೀವ. ಕರ್ಮವು ಪ್ರಧಾನವಾಗಿ ಘಾತಿ ಮತ್ತು ಅಘಾತಿ ಎಂದು ಎರಡು ಪ್ರಕಾರವಾಗಿದೆ. ಪುನಃ ಘಾತಿಕರ್ಮವು ಪ್ರಧಾನವಾಗಿ ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ ಮತ್ತು ಅಂತರಾಯ ಎಂದು ನಾಲ್ಕು ಪ್ರಕಾರವಾಗಿದೆ. ಹೀಗೆಯೇ ಅಘಾತಿಕರ್ಮವು ಪ್ರಧಾನವಾಗಿ ವೇದನೀಯ, ಆಯುಷ್ಯ, ನಾಮ ಮತ್ತು ಗೋತ್ರ ಎಂದು ನಾಲ್ಕು ಪ್ರಕಾರವಾಗಿ ಇದೆ. ಜ್ಞಾನಾವರಣೀಯ ಕರ್ಮವು ಮತಿಜ್ಞಾನಾವರಣೀಯ, ಶ್ರುತಜ್ಞಾನಾವರಣೀಯ, ಅವಧಿಜ್ಞಾನಾವರಣೀಯ, ಮನಃ ಪರ್ಯಯಜ್ಞಾನಾವರಣೀಯ ಮತ್ತು ಕೇವಲಜ್ಞಾನಾವರಣೀಯ ಎಂದು ಐದು ಪ್ರಕಾರವಾಗಿದೆ. ಇವುಗಳಲ್ಲಿ ಮೊದಲ ನಾಲ್ಕು ಪ್ರಕಾರದ ಜ್ಞಾನಾವರಣೀಯ ಕರ್ಮಗಳ ಕ್ಷಯೋಪಶಮದಿಂದ ಮತಿಜ್ಞಾನ, ಶ್ರುತಜ್ಞಾನ, ಅವಧಿಜ್ಞಾನ ಮತ್ತು ಮನಃಪರ್ಯಯ ಜ್ಞಾನಗಳೂ, ಕೇವಲಜ್ಞಾನಾವರಣೀಯ ಕರ್ಮದ ಕ್ಷಯದಿಂದ ಕೇವಲಜ್ಞಾನವೂ ಪ್ರಕಟವಾಗುವುವು. ಈ ಐದು ಪ್ರಕಾರದ ಜ್ಞಾನಗಳು ಸಮ್ಯಗ್‌ಜ್ಞಾನಗಳು. ಇವುಗಳಲ್ಲಿ ಮೊದಲ ಮೂರು ಪ್ರಕಾರದ ಜ್ಞಾನಗಳು ಅನುಕ್ರಮದಿಂದ ಕುಮತಿ, ಕುಶ್ರುತ ಮತ್ತು ವಿಭಂಗ ಎಂಬ ಮಿಥ್ಯಾಜ್ಞಾನ ಪ್ರಕಾರಗಳನ್ನೂ ಹೊಂದಿವೆ. ಈ ರೀತಿಯಿಂದ ಜ್ಞಾನವು ಎಂಟು ಪ್ರಕಾರವಾಗಿದೆ.

ಮತಿಜ್ಞಾನಕ್ಕೆ 'ಅಭಿ ನಿಬೋಧ' ಎಂಬ ಹೆಸರೂ ಇದೆ. ಇದು ಮತಿಜ್ಞಾನಾವರಣೀಯ ಕರ್ಮದ ಕ್ಷಯೋಪಶಮ ನಿಮಿತ್ತದಿಂದ ಪಂಚೇಂದ್ರಿಯ ಮತ್ತು ನೋ ಇಂದ್ರಿಯ ( ಮನ ಇಂದ್ರಿಯ)ಗಳ ಮೂಲಕ ಪ್ರಕಟವಾಗುವುದು. ಸ್ಪರ್ಶನ, ರಸನ, ಘ್ರಾಣ, ಚಕ್ಷು ಮತ್ತು ಶ್ರೋತ್ರ ಇವು ಐದು ಇಂದ್ರಿಯಗಳು. ಇವುಗಳಲ್ಲಿ ಒಂದು ,ಎರಡು, ಮೂರು, ನಾಲ್ಕು ಮತ್ತು ಐದು ಇಂದ್ರಿಯಗಳನ್ನು ಹೊಂದಿರುವ ಜೀವಿಗಳು ಅನುಕ್ರಮದಿಂದ ಏಕೇಂದ್ರಿಯ, ದ್ವೀಂದ್ರಿಯ,

ತ್ರೀಂದ್ರಿಯ ಚತುರಿಂದ್ರಿಯ ಮತ್ತು ಪಂಚೇಂದ್ರಿಯ ಜೀವಿಗಳೆನ್ನಿಸಿಕೊಳ್ಳುವರು. ಪಚೇಂದ್ರಿಯ ಜೀವಿಗಳು ಅಸಂಜ್ಞಿ ಮತ್ತು ಸಂಜ್ಞಿ ಎಂದು ಎರಡು ಪ್ರಕಾರ ; ಪಚೇಂದ್ರಿಯಗಳ ಜೊತೆಗೆ ಮನ ಇಂದ್ರಿಯವು ಸೇರಿದ್ದಲ್ಲಿ ಅದು ಸಂಜ್ಞಿಪಂಚೇಂದ್ರಿಯ ಜೀವಿ ಎನ್ನಿಸಿಕೊಳ್ಳುವುದು.

ಶ್ರುತಜ್ಞಾನಾವರಣೀಯ ಕರ್ಮ ಮತ್ತು ವೀರ್ಯಾಂತರಾಯ ಕರ್ಮಗಳ ಕ್ಷಯೋಪಶಮ ನಿಮಿತ್ತದಿಂದ ಮತಿಜ್ಞಾನ ಪೂರ್ವಕ– ಮತಿಜ್ಞಾನದಿಂದ ತಿಳಿಯಲಾದ ವಿಷಯಕ್ಕೆ ಸಂಬಂಧಿಸಿದ– ಅನ್ಯವಿಷಯವನ್ನು ತಿಳಿಯುವುದು ಶ್ರುತಜ್ಞಾನವು. ಉದಾಹರಣೆಯಾಗಿ ಕಿವಿಯಿಂದ 'ಘಟ' ಎಂಬುದನ್ನು ಕೇಳಿದಾಗ ಮತಿಜ್ಞಾನದಿಂದ 'ಘಟ' ಶಬ್ದದ ಜ್ಞಾನವಾಗುವುದು. ಶ್ರುತಜ್ಞಾನದಿಂದ ಆ 'ಘಟ' ಶಬ್ದದಿಂದ ಸೂಚಿತವಾಗುವ ವಸ್ತುವಿನ ಜ್ಞಾನವಾಗುವುದು.

ಅವಧಿಜ್ಞಾನವು ಅವಧಿಜ್ಞಾನಾವರಣೀಯ ಕರ್ಮದ ಕ್ಷಯೋಪಶಮ ನಿಮಿತ್ತದಿಂದ ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವಗಳ ಪರಿಮಿತಿಯೊಡನೆ ರೂಪಿದ್ರವ್ಯವನ್ನು (ಇಂದ್ರಿಯಗಳ ಸಹಾಯವಿಲ್ಲದೆಯೆ) ಪ್ರತ್ಯಕ್ಷವಾಗಿ ತಿಳಿಯುವುದು. ಈ ಅವಧಿ ಜ್ಞಾನವು ಪ್ರಧಾನವಾಗಿ ಭವಪ್ರತ್ಯಯ ನಿಮಿತ್ತ ಮತ್ತು ಕ್ಷಯೋಪಶಮ ನಿಮಿತ್ತದಿಂದ ಎರಡು ಪ್ರಕಾರವಾಗಿದೆ. ಆಯುಷ್ಯನಾಮಕರ್ಮದ ಉದಯ ನಿಮಿತ್ತದಿಂದ ಆಗುವ ಆತ್ಮನ ಪರ್ಯಾಯವು ಭವವು, ಈ ಭವದ ಪ್ರತ್ಯಯ ಎಂದರೆ ನಿಮಿತ್ತದಿಂದ ಉಂಟಾಗುವ ಅವಧಿಜ್ಞಾನವು ಭವ ಪ್ರತ್ಯಯ ಅವಧಿಜ್ಞಾನವು . ಇದರಲ್ಲಿ ಕ್ಷಯೋಪ ಶಮವು ನಿಮಿತ್ತವಾಗಿಲ್ಲ ಎಂದಲ್ಲ, ಭವನಿಮಿತ್ತದಿಂದಲೇ ಕ್ಷಯೋಪಶಮ ಉಂಟಾಗುವುದು. ಇಲ್ಲಿ ಭವನಿಮಿತ್ತವು ಪ್ರಧಾನವಾಗಿರುವುದರಿಂದ ಭವಪ್ರತ್ಯಯ ಅವಧಿ ಜ್ಞಾನ ಎಂದು ಹೆಸರಿದೆ. ಇದು ದೇವತೆಗಳಿಗೆ ಮತ್ತು ನಾರಕಿಗಳಿಗೆ ಉಂಟಾಗುವುದು. ಇಲ್ಲಿಯೂ ಸಮ್ಯಗ್ದೃಷ್ಟಿಗಳಲ್ಲಿ ಅವಧಿಜ್ಞಾನವು ಮಿಥ್ಯಾದೃಷ್ಟಿಗಳಲ್ಲಿ ವಿಭಂಗ ಪ್ರಕಾರದ ಅವಧಿಜ್ಞಾನವೂ ಉಂಟಾಗುವುದೆಂದು ತಿಳಿಯಬೇಕು. ಅವಧಿಜ್ಞಾನಾವರಣೀಯ ಕರ್ಮದ ಕ್ಷಯೋಪಶಮ ನಿಮಿತ್ತದಿಂದ, ಸಂಜ್ಞಿಗಳೂ ಪರ್ಯಾಪ್ತಕರೂ, ಸಮ್ಯಗ್ದರ್ಶನಾದಿ ಕಾರಣದಿಂದ ಶಾಂತಕ್ಷೀಣಕರ್ಮರೂ ಆದ ತಿರ್ಯಂಚರಲ್ಲಿ ಮತ್ತು ಮನುಷ್ಯರಲ್ಲಿ ಕ್ಷಯೋಪಶಮ ನಿಮಿತ್ತದ ಅವಧಿಜ್ಞಾನ ಉಂಟಾಗುವುದು. ಈ ಅವಧಿಜ್ಞಾನ ಅನುಗಾಮಿ, ಅನನುಗಾಮಿ, ವರ್ಧಮಾನ, ಹೀಯಮಾನ, ಅವಸ್ಥಿತ ಮತ್ತು ಅನವಸ್ಥಿತ ಎಂದು ಆರು

ಪ್ರಕಾರವಾಗಿದೆ. ಮತ್ತೊಂದು ಅಭಿಮತದಂತೆ ಅವಧಿಜ್ಞಾನವು ದೇಶಾವಧಿ, ಪರಮಾವಧಿ ಮತ್ತು ಸರ್ವಾವಧಿ ಎಂದು ಮೂರು ಪ್ರಕಾರವಾಗಿದೆ. ಇವುಗಳಲ್ಲಿ ದೇಶಾವಧಿ ಮತ್ತು ಪರಮಾವಧಿಗಳು ಜಘನ್ಯ. ಉತ್ಕೃಷ್ಟ ಮತ್ತು ಅಜಘನ್ಯೋತ್ಕೃಷ್ಟ ಎಂಬ ಮೂರು ಮೂರು ಮರು ವುಭಾಗಗಳುಳ್ಳವಾಗಿವೆ.

ದೇಶಾವಧಿಯು ವರ್ಧಮಾನ, ಹೀಯಮಾನ ಅವಸ್ಥಿತ, ಅನವಸ್ಥಿತ, ಅನುಗಾಮೀ, ಅನನುಗಾಮೀ, ಅಪ್ರತಿಪಾತೀ ಮತ್ತು ಪ್ರತಿಪಾತೀ ಎಂಬ ಎಂಟು ಭೇದಗಳುಳ್ಳದ್ದಾಗಿದೆ. ಪರಮಾವಧಿಯು ಹೀಯಮಾನ ಮತ್ತು ಪ್ರತಿಪಾತಿಗಳಿಂದ ಹೊರತಾದ ಇತರ ಆರು ಭೇದಗಳುಳ್ಳದ್ದಾಗಿದೆ. ಸರ್ವಾವಧಿಯು ಅವಸ್ಥಿತ, ಅನುಗಾಮೀ ವರ್ಧಮಾನ* ಮತ್ತು ಅಪ್ರತಿಪಾತೀ ಎಂಬ ನಾಲ್ಕು ಭೇದಗಳುಳ್ಳದ್ದಾಗಿದೆ. ಸೂರ್ಯನನ್ನು ಪ್ರಕಾಶವು ಅನುಸರಿಸಿ ಹೋಗುವಂತೆ ಅವಧಿಜ್ಞಾನಿಯನ್ನು ಅನುಸರಿಸಿ ಹೋಗುವ ಪ್ರಕಾರದ ಅವಧಿಜ್ಞಾನವು ಅನುಗಾಮಿಯ ಹಾಗೆ ಅನುಸರಿಸಿ ಹೋಗದಿರುವಂತ ಹುದು ಅನನುಗಾಮಿ. ಮೂಡಿದ ಸಮಯದಿಂದ ವೃದ್ಧಿಹೊಂದುತ್ತಾ ಹೋಗುವುದು ವರ್ಧಮಾನವು, ಇದರ ವಿರುದ್ಧವಾಗಿ ಕಡಿಮೆಯಾಗುತ್ತಾ ಹೋಗುವಂತಹುದು 'ಹೀಯಮಾನ' ವು ಹೆಚ್ಚುಕಡಿಮೆಯಾಗದೆ ಭವದ ಅಂತ್ಯ ಅಥವಾ ಕೇವಲಜ್ಞಾನದ ಉತ್ಪತ್ತಿಯವರೆಗೆ ಇರುವಂತಹುದು ಅವಸ್ಥಿತವು. ಹೆಚ್ಚುಕಡಿಮೆಯಾಗುವಂತಹುದು 'ಅನವಸ್ಥಿತವು'. ಮಿಂಚಿನಂತೆ ಕ್ಷಣಮಾತ್ರ ಪ್ರಕಾಶಿಸಿ ನಾಶವಾಗುವಂತಹುದು ಪ್ರತಿ ಪಾತಿಯು, ಇದರ ವಿರುದ್ಧವಾದುದು ಅಪ್ರತಿಪಾತಿಯು.

ಮನಃಪರ್ಯಯ ಜ್ಞಾನವು ಪರರ ಮನದಲ್ಲಿರುವ ಮೂರ್ತ ದ್ರವ್ಯಗಳನ್ನು ಆ ಮನದ ಸಹಿತ ಪ್ರತ್ಯಕ್ಷವಾಗಿ ತಿಳಿಯುವುದು. ದ್ರವ್ಯಾಪೇಕ್ಷೆಯಿಂದ ಜಘನ್ಯಪ್ರಮಾಣವಾಗಿ ಒಂದು ಸಮಯದ ಔದಾರಿಕ ಶರೀರದ ನಿರ್ಜರಾರೂಪ ದ್ರವ್ಯದವರೆಗೆ ತಿಳಿಯುವುದು. ಉತ್ಕೃಷ್ಟದಿಂದ ಒಂದು ಸವಯದಲ್ಲಿ ಪ್ರತಿಬದ್ಧವಾದ ಕಾರ್ಮಣ ದ್ರವ್ಯದ ಅನಂತಭಾಗಗಳಲ್ಲಿ ಒಂದು ಭಾಗದವರೆಗೆ ತಿಳಿಯುವುದು. ಕ್ಷೇತ್ರದ ಅಪೇಕ್ಷೆಯಿಂದ ಜಘನ್ಯಪ್ರಮಾಣವಾಗಿ ಗಾವುದ ಪೃಥಕ್ತ್ವ–ಎಂದ್ರೆ, ಎರಡು ಮೂರು ಹರಿದಾರಿವರೆಗಿನ ಕ್ಷೇತ್ರವನ್ನು ತಿಳಿಯುವುದು. ಉತ್ಕೃಷ್ಟ ಪ್ರಮಾಣದಿಂದ ಮನುಷ್ಯ

* ಇದು ಪಾಠಾಂತರದಂತೆ ಮೂಲ ಪಾಠದಲ್ಲಿ 'ಅನುಗಾಮೀ' ಎಂದಿದೆ.

ಕ್ಷೇತ್ರ ಪರ್ಯಂತ ತಿಳಿಯುವುದು. ಅದರಿಂದ ಹೊರಗೆ ತಿಳಿಯಲಾರದು. ಕಾಲದ ಅಪೇಕ್ಷೆಯಿಂದ ಜಘನ್ಯಪ್ರಮಾಣವಾಗಿ ಎರಡು ಮೂರು ಭವಗಳ ಗ್ರಹಣ ಮಾಡುವುದು. ಉತ್ಕೃಷ್ಟದಿಂದ ಅಸಂಖ್ಯಾತ ಭವಗಳ ಗ್ರಹಣೆ ಮಾಡುವುದು.

ಕೇವಲಜ್ಞಾನವು ಎಲ್ಲ ದ್ರವ್ಯಗಳನ್ನು ಭೂತ, ಭವಿಷ್ಯತ್ ಮತ್ತು ವರ್ತಮಾನದ ಸರ್ವ ಪರ್ಯಾಯಗಳ ಸಹಿತ ಪ್ರತ್ಯಕ್ಷವಾಗಿ ತಿಳಿಯುವುದು.

ಪ್ರಸ್ತುತ ಶ್ರುತ ಅಥವಾ ಆಗಮ ವಿಷಯದ ಅಪೇಕ್ಷೆಯಿಂದ ಶ್ರುತಜ್ಞಾನದ ವಿಶೇಷ ವೀವರಣೆಯ ಅಗತ್ಯವಿದೆ.

'ಶ್ರುತಂ ಮತಿಪೂರ್ವಂ ದ್ವ್ಯನೇಕದ್ವಾದಶಭೇದಂ' ಎಂದು ತತ್ತ್ವಾರ್ಥಸೂತ್ರ ಕಾರರು ಶ್ರುತಜ್ಞಾನದ ಸ್ವರೂಪವನ್ನು ಸಂಗ್ರಹಾತ್ಮಕವಾಗಿ ಹೇಳಿದ್ದಾರೆ. ಶ್ರುತಜ್ಞಾನದ ಆವಿರ್ಭಾವಕ್ರಮ ಮತ್ತು ಅದರಿಂದಾಗುವ ವಸ್ತುಜ್ಞಾನದ ಪ್ರಕಾರವನ್ನು ಹಿಂದೆ ತಿಳಿಸಿದೆ. 'ಶ್ರುತ' ಎಂದರೆ 'ಕಿವಿಯಿಂದ ಕೇಳುವುದು' ಎಂದರ್ಥ. ಇದು ಕ್ರಿಯಾಪದ (ಧಾತ)ಮೂಲದ ಸಾಧರಣ ಅರ್ಥ. ಆದರೆ ರೂಢಿವಶವಾಗಿ ವಿಶೇಷಾರ್ಥದಲ್ಲಿ ಪ್ರಯೋಗ ಹೊಂದಿದೆ. ಇದರಂತೆ, ಅರಿಹಂತನಿಂದ ಪ್ರತಿಪಾದಿತವಾದ ವಸ್ತು ಸ್ವರೂಪದ  ಅರ್ಥವುಳ್ಳ, ಶ್ರೇಷ್ಠರೀತಿಯಾದ ಗ್ರಂಥರೂಪದಲ್ಲಿ ಗಣಧರರಿಂದ ರಚಿತವಾಗಿರುವ ದ್ವಾದಶಾಂಗವು 'ಶ್ರುತ' ವೆನ್ನಿಸಿಕೊಂಡಿದೆ. ಶ್ರುತವನ್ನು ಆಗಮ, ಪ್ರವಚನ, ಸಿದ್ಧಾಂತ ಸುತ್ತ ಎಂದೂ ಹೆಸರಿಸಲಾಗಿದೆ. ಈ ಹೆಸರುಗಳಲ್ಲಿ 'ಆಗಮ' ಎಂಬ ಹೆಸರು ಹೆಚ್ಚು ಬಳಕೆಯಲ್ಲಿದೆ.

ಶ್ರುತ– ಆಗಮಕ್ಕೆ ಅರ್ಥದ ಅಪೇಕ್ಷೆಯಿಂದ ಕೇವಲಜ್ಞಾನವು ಮೂಲವಾಗಿದೆಯಾದರೆ ದ್ರವ್ಯ ಮತ್ತು ಭಾವಶ್ರುತಗಣನೆಯಿಂದ ಶ್ರುತಜ್ಞಾನವು ಮೂಲವಾಗಿದೆ. 'ಶ್ರುತಜ್ಞಾನ' ಎಂಬುದು ಗುಣನಾಮ, ಎಂದರೆ ಸಾರ್ಥಕವಾದ ಹೆಸರು. ಇದು ಪರ್ಯಾಯ, ಪರ್ಯಾಯಸಮಾಸ; ಅಕ್ಷರ,

ಅಕ್ಷರಸಮಾಸ; ಪದ, ಪದಸಮಾಸ; ಸಂಘಾತ. ಸಂಘಾತಸಮಾಸ ; ಪ್ರತಿಪತ್ತಿ, ಪ್ರತಿಪತ್ತಿಸಮಾಸ; ಅನುಯೋಗ, ಅನುಯೋಗ ಸಮಾಸ; ಪ್ರಾಭೃತಕಪ್ರಾಭೃತಕ, ಪ್ರಾಭೃತಕಪ್ರಾಭೃತಕಸಮಾಸ ; ಪ್ರಾಭೃತಕ, ಪ್ರಾಭೃತಕಸಮಾಸ ; ವಸ್ತು , ವಸ್ತುಸಮಾಸ ; ಪೂರ್ವ, ಪೂರ್ವಸಮಾಸ ಎಂಬ ಇಪ್ಪತ್ತು ವಿಭಾಗಗಳನ್ನೊಳಗೊಂಡು ಸಂಖ್ಯಾತ ಭೇದರೂಪದ್ದಾಗಿದೆ, ಮತ್ತು ಅರ್ಥದ ಅಪೇಕ್ಷೆಯಿಂದ ಅನಂತವಾಗಿದೆ.

ಈಮೇಲೆ ಹೇಳಿದ ಇಪ್ಪತ್ತು ಭೇದಗಳಲ್ಲಿ ಮೊದಲನೆಯದಾದ ಪರ್ಯಾಯಶ್ರುತ ಜ್ಞಾನವು ಸೂಕ್ಷ್ಮನಿತ್ಯಗೋದಕ್ಕೆ ಅದು ಹುಟ್ಟುವ ಪ್ರಥಮ ಸಮಯದಲ್ಲಿರುವುದು. ಇದಕ್ಕೆ ಲಬ್ಧ್ಯಕ್ಷರಶ್ರುತಜ್ಞಾನವೆಂಬ ಹೆಸರೂ ಇದೆ. ಶ್ರುತಜ್ಞಾನದ ಭೇದಗಳಲ್ಲಿ ಎಲ್ಲಕ್ಕಿಂತಲೂ ಜಘನ್ಯವಾಗಿರುವ ಇದು ಶ್ರುತಾಜ್ಞಾನ ಕರ್ಮದ ಅವರಣಕ್ಕೊಳಗಾಗದಂತಹುದು ಮತ್ತು ನಾಶರಹಿತವಾದುದು. ಇದು ಅಕ್ಷರಶ್ರುತಜ್ಞಾನದ ಅನಂತ ಭಾಗಗಳಲ್ಲಿ ಒಂದು ಭಾಗದಷ್ಟಿರುವುದು.

ಪರ್ಯಾಯ ಶ್ರುತಜ್ಞಾನದಿಂದ ಅನಂತ ಭಾಗವೃದ್ಧಿ, ಅಸಂಖ್ಯಾತಭಾಗವೃದ್ಧಿ, ಸಂಖ್ಯಾತಭಾಗವೃದ್ಧಿ, ಸಂಖ್ಯಾತಗುಣವೃದ್ಧಿ, ಅಸಂಖ್ಯಾತಗುಣವೃದ್ಧಿ ಮತ್ತು ಅನಂತ ಗುಣವೃದ್ಧಿ ಎಂಬ ಆರು– ಷಟ್ ವೃದ್ಧಿಕ್ರಮದಿಂದ ಅಕ್ಷರಶ್ರುತಜ್ಞಾನದವರೆಗೆ ವೃದ್ಧಿಯಾಗುವ ಜ್ಞಾನವು ಪರ್ಯಾಯ ಸಮಾಸ ಶ್ರುತಜ್ಞಾನವು.

'ಅ' ಕಾರ ಮೊದಲಾದ ಅಕ್ಷರಗಳಲ್ಲಿ ಯಾವುದಾದರೊಂದು ಅಕ್ಷರವನ್ನು ತಿಳಿಯುವ ಜ್ಞಾನವು ಅಕ್ಷರ ಶ್ರುತಜ್ಞಾನವು. ಇದು ಅಸಂಖ್ಯಾತ ಭೇದಗಳುಳ್ಳದ್ದಾಗಿದೆ.

ಅಕ್ಷರ ಶ್ರುತಜ್ಞಾನದ ಅನಂತರ ಒಂದೊಂದು ಅಕ್ಷರ ಜ್ಞಾನ ವೃದ್ಧಿಕ್ರಮದಿಂದ ಪದಜ್ಞಾನದವರೆಗಿನ ಮಧ್ಯದ ಅಕ್ಷರಗಳ ಜ್ಞಾನವು ಅಕ್ಷರ ಸಮಾಸ ಶ್ರುತಜ್ಞಾನವು.

ಪದವು ಅರ್ಥಪದ, ಪ್ರಮಾಣಪದ, ಮತ್ತು ಮಧ್ಯಮಪದವೆಂದು ಮೂರು ಪ್ರಕಾರವಾಗಿದೆ. ಅಕ್ಷರಗಳ ಸಂಖ್ಯೆಯ ಬಗ್ಗೆ ನಿಯಮವಿಲ್ಲದಿರುವುದೂ ವಕ್ತೃವಿನ ಅಭಿಪ್ರಾಯವನ್ನು ತಿಳಿಸುವುದೂ ಆಗಿರುವ ಪದ ಅರ್ಥಪದ. ಎಂಟು ಮೊದಲಾದ ನಿಯಮಿತ ಸಂಖ್ಯೆಯುಳ್ಳದ್ದೂ. ಶ್ಲೋಕದ ನಾಲ್ಕು ಪಾದಗಳಲ್ಲಿ ಒಂದು ಪಾದವೂ ಅಂಗಬಾಹ್ಯಶ್ರುತದ ಸಂಖ್ಯೆಯ ಬೋಧಕವೂ ಆದ ಪದವು

ಪ್ರಮಾಣಪದವು. ಅಂಗ ಪ್ರವಿಷ್ಟ ಶ್ರುತದ ಸಂಖ್ಯೆಯನ್ನು ಹೇಳುವ ಪದವು ಮಧ್ಯಮಪದವು. ಅಂಗಪ್ರವಿಷ್ಟ ಶ್ರುತವು ಸಾವಿರದ ಆರುನೂರಮುವತ್ತನಾಲ್ಕುಕೋಟೆ ಎಂಬತ್ತಮೂರು ಲಕ್ಷ ಏಳು ಸಾವಿರದ ಎಂಟುನೂರ ಎಂಭತ್ತೆಂಟು (೧೬೩೪,೮೩,೦೭,೮೮೮) ಪದಾಕ್ಷರಗಳುಳ್ಳದ್ದಾಗಿದೆ. ಅಂಗಬಾಹ್ಯ ಶ್ರುತಜ್ಞಾನವು ಎಂಟುಕೋಟಿ ಒಂದು ಲಕ್ಷ ಎಂಟುಸಾವಿರದ ಒಂದುನೂರಎಪ್ಪತ್ತೈದು (೮,೦೧,೦೮,೧೭೫) ಅಕ್ಷರಗಳುಳ್ಳದ್ದಾಗಿದೆ.

ಪದಶ್ರುತಜ್ಞಾನದ ಅನಂತರ ಸಂಘಾತಶ್ರುತಜ್ಞಾನದವರೆಗೆ ಅಕ್ಷರವೃದ್ಧಿಕ್ರಮದಿಂದ ವೃದ್ಧಿಯಾಗುವ ಜ್ಞಾನಭೇದಳಿಗೆ ಪದಸಮಾಸಶ್ರುತಜ್ಞಾನವೆಂದು ಹೆಸರು.

ಸಂಖ್ಯಾತಸಹಸ್ರಪದಗಳ ಸಮೂಹವೂ ಮತ್ತು ನರಕಾದಿ ನಾಲ್ಕುಗತಿಗಳಲ್ಲಿ ಯಾವುದಾದರೊಂದು ಗತಿಯನ್ನು ಸಮರ್ಥವಾಗಿ ವರ್ಣಿಸುವುದೂ ಆದ ಜ್ಞಾನವು ಸಂಘಾತಶ್ರುತಜ್ಞಾನವು.

ಸಂಘಾತಶ್ರುತಜ್ಞಾನದ ಅನಂತರ ಪ್ರತಿಪತ್ತಿಶ್ರುತಜ್ಞಾನದವರೆಗೆ ಅಕ್ಷರಪದವೃದ್ಧಿ ಕ್ರಮದಿಂದ ವೃದ್ಧಿಯಾಗುವ ಎಲ್ಲ ಜ್ಞಾನಭೇದಗಳಿಗೆ ಸಂಘಾತಸಮಾಸಶ್ರುತಜ್ಞಾನವೆಂದು ಹೆಸರು.

ಸಂಖ್ಯಾತ ಸಂಘಾತ ಶ್ರುತಜ್ಞಾನಭೇದ ಪರಿಮಿತವೂ ಮತ್ತು ಸಮರ್ಥರೀತಿಯಿಂದ ನಾಲ್ಕುಗತಿಗಳನ್ನು ವರ್ಣಿಸುವುದೂ ಆಗಿರುವ ಜ್ಞಾನವು ಪ್ರತಿಪತ್ತಿಶ್ರುತಜ್ಞಾನವು.

ಪ್ರತಿಪತ್ತಿಶ್ರುತಜ್ಞಾನದ ಅನಂತರ ಅನುಯೋಗಶ್ರುತಜ್ಞಾನದವರೆಗೆ ಅಕ್ಷರ ಪದ ವೃದ್ಧಿಗ್ರಮದಿಂದ ವೃದ್ಧಿಯಾಗುವ ಎಲ್ಲ ಜ್ಞಾನಭೇದಗಳಿಗೆ ಪ್ರತಪತ್ತಿಸಮಾಸಶ್ರುತ ಜ್ಞಾನವೆಂದು ಹೆಸರು.

ಸಂಖ್ಯಾತ ಪ್ರತಿಪತ್ತಿ ಭೇದ ಪರಿಮಿತವೂ ಮತ್ತು ಗತೀಂದ್ರಿಯಕಾಯ ಮುಂತಾದ ಹದಿನಾಲ್ಕು ಮಾರ್ಗಣಾಸ್ಥಾನಗಳನ್ನು ಸಮರ್ಥರೀತಿಯಿಂದ ವರ್ಣೀಸುವುದೂ ಆದ ಜ್ಞಾನವು ಅನುಯೋಗಶ್ರುತಜ್ಞಾನವು.

ಅನುಯೋಗಶ್ರುತಜ್ಞಾನದ ಅನಂತರ ಪ್ರಾಭೃತಕಪ್ರಾಭೃತಕಶ್ರುತಜ್ಞಾನದವರೆಗ ಅಕ್ಷರಪದವೃದ್ಧಿಕ್ರಮದಿಂದ ವೃದ್ಧಿಯಾಗುವ ಭೇದ ಸಮಸ್ತವು ಅನುಯೋಗಸಮಾಸ ಶ್ರುತಜ್ಞಾನವು.

ಸಂಖ್ಯಾತ ಅನುಯೋಗಪರಿಮಿತಜ್ಞಾನವು ಪ್ರಾಭೃತಕಪ್ರಾಭೃತಕಶ್ರುತಜ್ಞಾನವು ಪ್ರಾಭೃತಕ ಪ್ರಾಭೃತಕ ಶ್ರುತಜ್ಞಾನಾನಂತರದ ಪ್ರಾಭೃತಕಶ್ರುತಜ್ಞಾನದವರೆಗಿನ ಜ್ಞಾನ ಬೇದ ಸಮಸ್ತವೂ ಪ್ರಾಭೃತಕಭೃತಕಸಮಾಸಶ್ರುತಜ್ಞಾನವು.

ಇಪ್ಪತ್ತನಾಲ್ಕು ಪ್ರಾಭೃತಕಪ್ರಾಭೃತಕಗಳ ಪರಿಮಿತಜ್ಞಾನವು ಪ್ರಾಭೃತಕಶ್ರುತಜ್ಞಾನವು.

ಪ್ರಾಭೃತಕಶ್ರುತಜ್ಞಾನಾನಂತರ ವಸ್ತುಶ್ರುತಜ್ಞಾನದವರೆಗೆ ವೃದ್ಧಿಯಾಗುವ ಜ್ಞಾನಭೇದ ಸಮಸ್ತವು ಪ್ರಾಭೃತಕಸಮಾಸ ಶ್ರುತಜ್ಞಾನವು.

ಇಪ್ಪತ್ತು ಪ್ರಾಭೃತಕಗಳಜ್ಞಾನಭೇದ ಪರಿಮಿತವಾದ ಜ್ಞಾನವು ವಸ್ತುಶ್ರುತಜ್ಞಾನವು. ವಸ್ತುಶ್ರುತಜ್ಞಾನಾನಂತರ ಪೂರ್ವಜ್ಞಾನದವರೆಗೆ ವೃದ್ಧಿಯಾಗುವ ಜ್ಞಾನಭೇದ ಸಮಸ್ತವು ವಸ್ತುಸಮಸ್ತಶ್ರುತಜ್ಞಾನವು.

ಪೂರ್ವಶ್ರುತಜ್ಞಾನವು ಹದಿನಾಲ್ಕು ಭೇದಗಳನ್ನೊಳಗೊಂಡಿದೆ. ಇವುಗಳಲ್ಲಿ ಮೊದಲನೆಯದು ಉತ್ಪಾದಪೂರ್ವ, ಇದು ಹತ್ತು ವಸ್ತುಶ್ರುತಜ್ಞಾನ ಪರಿಮಿತವಾಗಿದೆ.

ಉತ್ಪಾದಪೂರ್ವದ ಅನಂತರ ಆಗ್ರಾಯಣೀಯ ಪೂರ್ವದವರೆಗೆ ವೃದ್ಧಿಯಾಗುವ ಭೇದಸಮಸ್ತವು ಉತ್ಪಾದಪೂರ್ವಸಮಾಸಶ್ರುತಜ್ಞಾನವು. ಇದೇ ಕ್ರಮದಿಂದ ಮುಂದಿನ ಹದಿಮೂರು ಭೇದಗಳನ್ನು ತಿಳಿಯಬೇಕು. ಇದು ಭಾವಶ್ರುತಜ್ಞಾನದ ವಿವರಣೆ.

ಶ್ರುತಜ್ಞಾನದ ಅರ್ಥಾಧಿಕಾರವು ಅಂಗಬಾಹಿರ (ಅಂಗಬಾಹ್ಯ) ಮತ್ತು ಅಂಗ ಪ್ರವಿಷ್ಟ ಎಂದು ಎರಡು ಪ್ರಕಾರವಾಗಿದೆ. ಅವುಗಳಲ್ಲಿ ಅಂಗಬಾಹ್ಯವು, ಶ್ರುತಾರ್ಥವನ್ನು ಉತ್ತಮರೀತಿಯಿಂದ ತಿಳಿದವರಾದ, ಗಣಧರರ ಆರಾತೀಯ– ಹತ್ತಿರಕಾಲದ ಶಿಷ್ಯಪ್ರಶಿಷ್ಯರಿಂದ ಅಲ್ಪಾಯುಷಿಗಳಾದವರ ಹಿತಕ್ಕಾಗಿ ರಚಿತವಾಗಿದ್ದು ಕಾಲಿಕ, ಉತ್ಕಾಲಿಕ ಮುಂತಾದ ಅನೇಕ ಭೇದಗಳುಳ್ಳದ್ದಾಗಿದೆ.೨ ಸಾಮಾಯಿಕ, ಚತುರ್ವಿಂಶತಿಸ್ತವ,ವಂದನಾ ಪ್ರತಿಕ್ರಮಣ, ವೈನಯಿಕ, ಕೃತಿಕರ್ಮ, ದಶವೈಕಾಲಿಕ ಉತ್ತರಾಧ್ಯಯನ, ಕಲ್ಪವ್ಯವಹಾರ, ಕಲ್ಪ್ಯಾಕಲ್ಪ್ಯ, ಮಹಾಕಲ್ಪ, ಪುಂಡರೀಕ, ಮಹಾಪಂಡರೀಕ ಮತ್ತು ನಿಷಿದ್ಧಿಕಾ (ಅಶೀತಿಕಾ) ಎಂಬ ಹದಿನಾಲ್ಕು ಪ್ರಕೀರ್ಣಕಗಳ ಅರ್ಥಧಿಕಾರಗಳನ್ನುಳ್ಳದ್ದಾಗಿದೆ. ಇವುಗಳಲ್ಲಿ ಸಾಮಾಯಿಕ ಅರ್ಥಾಧಿಕಾರವು ನಮ, ಸ್ಥಾಪನಾ, ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವಗಳ

ಮೂಲಕ ಸಮತಾಭಾವದ ವಿಧಾನವನ್ನು ವರ್ಣಿಸುವುದು, ಚತುರ್ವಿಂಶತಿ ಸ್ತವ ಅರ್ಥಾಧಿಕಾರವು ಚತುರ್ವಿಂಶತಿ ತೀರ್ಥಂಕರರ ವಂದನಾವಿಧಿ, ಅವರ ಹೆಸರು, ಸಂಸ್ಥಾನ, ಉತ್ಸೇಧ, ಪಂಚಮಹಾಕಲ್ಯಾಣ, ಮುವ್ವತ್ತಾರು ಅತಿಶಯಗಳ ಸ್ವರೂಪ ಮತ್ತು ತೀರ್ಥಂಕರರ ವಂದನೆಯ ಸಫಲತೆಯನ್ನು ಮಾಡುವುದು, ವಂದನಾ ಅರ್ಥಾಧಿಕಾರವು ಒಬ್ಬ ಜಿನೇಂದ್ರನ ಜಿನಾಲಯದ ವಿಷಯಕ್ಕೆ ಸಂಬಂಧಿಸಿದಂತೆ ನಿರವದ್ಯ ಎಂದರೆ ಪ್ರಶಸ್ತ ಭಾವದಿಂದ ವರ್ಣನೆ' ಮಾಡುವುದು. ಪ್ರತಿಕ್ರಮಣ ಅರ್ಥಾಧಿಕಾರವು ಕಾಲ ಮತ್ತು ಪುರುಷರ ಆಶ್ರಯದಿಂದ ಏಳು ಪ್ರಕಾರದ ಪ್ರತಿಕ್ರಮಣವನ್ನು ವಿವರಿಸುವುದು– ಪ್ರತಿಕ್ರಮಣವೆಂದರೆ ಪ್ರಮಾದಜನ್ಯವಾದ ದೋಷಗಳ ದೂರೀಕರಣಕ್ಕಾಗಿ ಮಾಡುವ ಆಚಾರವಿಧಿ. ಇದು ದೈವಸಿಕ, ರಾತ್ರಿಕ. ಪಾಕ್ಷಿಕ, ಚಾತುರ್ಮಾಸಿಕ, ಸಾಂವತ್ಸರಿಕ, ಐರ್ಯಾಪಥಿಕ ಮತ್ತು ಔತ್ತಮಾರ್ಥಿಕ ಎಂದು ಏಳು ಪ್ರಕಾರವಾದದ್ದಾಗಿದೆ. ವೈನಯಿಕ ಅರ್ಥಾಧಿಕರವು ಜ್ಞಾನವಿನಯ,  ದರ್ಶನವಿನಯ, ಚಾರಿತ್ರ ವಿನಯ, ತಪೋವಿನಯ ಮತ್ತು ಉಪಚಾರವಿನಯ ಎಂಬ ಐದು ಪ್ರಕಾರದ ವಿನಯಗಳನ್ನು ವರ್ಣಿಸುವುದು, ಕೃತಿಕರ್ಮ ಅರ್ಥಾಧಿಕಾರವು ಅರಿಹಂತ, ಸಿದ್ಧ, ಆಚಾರ್ಯ ಬಹುಶ್ರುತ (=ಉಪಾಧ್ಯಾಯ) ಮತ್ತು ಸಾಧುಗಳ ಪೂಜಾವಿಧಾನವನ್ನು ವರ್ಣಿಸುವುದು. ದಶವೈಕಾಲಿಕ ಅರ್ಥಾಧಿಕಾರವು ಮುನಿಗಳ ಆಚಾರ ಮತ್ತು ಗೋಚಾರ ವಿಧಿಗಳನ್ನು ವರ್ಣಿಸುವುದು– ವಿಶಿಷ್ಟಕಾಲವು ವಿಕಾಲವು, ಅದರಲ್ಲಿರುವ ವಿಶೇಷವು ವೈಕಾಲಿಕವು, ಇವು ಸಂಖ್ಯೆಯಿಂದ ದಶ– (ಹತ್ತು), ಈ ಹತ್ತು (ದಶ) ವೈಕಾಲಿಕಗಳುಳ್ಳದ್ದು ದಶವೈಕಾಲಿಕವು. ಉತ್ತರಾಧ್ಯಯನ ಅರ್ಥಾಧಿಕಾರವು ಉತ್ತರ ಪದಗಳನ್ನು ವರ್ಣೀಸುವುದು, ನಾಲ್ಕು ಪ್ರಕಾರದ ಉಪಸರ್ಗಗಳ ಮತ್ತು ಇಪ್ಪತ್ತೆರಡು ಪರೀಷಹಗಳ ಸಹನದ ವಿಧಾನ ಮತ್ತು ಅವುಗಳ ಫಲವನ್ನು ಕುರಿತ ಪ್ರಶ್ನೆಗಳಿಗೆ ಉತ್ತರಗಳ ವರ್ಣನೆಯಿಂದ ಕಲ್ಪ್ಯವ್ಯವಹಾರವು ಸಾಧುಗಳಿಗೆ ಯೋಗ್ಯವಾದ ಆಚಾರ ಮತ್ತು ಯೋಗ್ಯವಲ್ಲದ ಆಚರಣೆ ಪ್ರಸಂಗದ ಪ್ರಾಯಶ್ಚಿತ್ತ ವಿಧಿಯನ್ನು ವರ್ಣಿಸುವುದು. ಕಲ್ಪ್ಯ ಎಂದರೆ ಯೋಗ್ಯವೆಂದು ಮತ್ತು ವ್ಯವಹಾರವೆಂದರೆ ಆಚಾರ ಎಂದರ್ಥ. ಅಲ್ಪ್ಯಕಲ್ಪ್ಯ ಅರ್ಥಾಧಿಕಾರವು ಸಾಧುಗಳಿಗೆ ಯಾವುದು ಆಚಾರಯೋಗ್ಯವಾಗಿದೆ ಮತ್ತು ಯಾವುದು ಆಚಾರಯೋಗ್ಯವಾಗಿಲ್ಲ 'ಎಂಬುದನ್ನು ವರ್ಣಿಸುವುದು. ಮಹಾಕಲ್ಪ್ಯ ಅರ್ಥಾಧಿಕಾರವು ಕಾಲ ಮತ್ತು

ಸಂಹನನಗಳ ಆಶ್ರಯದಿಂದ ಸಾಧುಗಳಿಗೆ ಯೋಗ್ಯವಾದ ದ್ರವ್ಯಕ್ಷೇತ್ರಾದಿಗಳನ್ನು ವರ್ಣಿಸುವುದು. ಇದರಲ್ಲಿ ಉತ್ಕೃಷ್ಟಸಂಹನನಾದಿ ವಿಶಿಷ್ಟದ್ರವ್ಯ. ಕ್ಷೇತ್ರ, ಕಾಲ ಮತ್ತು ಭಾವಗಳ ಆಶ್ರಯ ಪಡೆದು ಪ್ರವರ್ತಿಸುವ ಜಿನಕಲ್ಪೀ ಸಾಧುಗಳಿಗೆ ಯೋಗ್ಯವಾದ ತ್ರಿಕಾಲ ಯೋಗ ಮುಂತಾದುವುಗಳ ಅನುಷ್ಠಾನ, ಹಾಗೂ ಸ್ಥವಿರಕಲ್ಪೀ ಸಾಧುಗಳ ದೀಕ್ಷೆ. ಶಿಕ್ಷೆ. ಗಣಪೋಷಣ, ಆತ್ಮಸಂಸ್ಕಾರ, ಸಲ್ಲೇಖನಾ ಮುಂತಾದವುಗಳ ವಿಶೇಷವರ್ಣನೆಯಿದೆ. ಪುಂಡರೀಕ ಅರ್ಥಾಧಿಕಾರವು ಭವನವಾಸೀ, ವ್ಯಂತರ, ಜ್ಯೋತಿಷ್ಕ ಮತ್ತು ಕಲ್ಪವಾಸೀ ನಾಲ್ಕು ಪ್ರಕಾರದ ದೇವತೆಗಳಾಗಿ ಹುಟ್ಟಲು ಕಾರಣವಾಡ ದಾನ, ಪೂಜಾ ತಪಶ್ಚರಣ, ಅಕಾಮ ನಿರ್ಜರಾ, ಸಮ್ಯಗ್ದರ್ಶನ, ಸಂಯಮ ಮುಂತಾದ ಅನುಷ್ಠಾನಗಳ ವರ್ಣನೆ ಮಾಡುವುದು. ಮಹಾಪುಂಡರೀಕ ಅರ್ಥಾಧಿಕಾರವು ಸಕಲ ಇಂದ್ರ ಮತ್ತು ಪ್ರತೀಂದ್ರರಾಗಿ ಜನಿಸಲು ಕಾರಣವಾದ ತಪೋವಿಶೇಷದಿಗಳನ್ನು ವರ್ಣನೆ ಮಾಡುವುದು. ನಿಷಿದ್ಧಿ ಅರ್ಥಾಧಿಕಾರವು ಬಹುಪ್ರಕಾರದ ಪ್ರಾಯಶ್ಚಿತ್ತವನ್ನು 'ವರ್ಣನೆ ಮಾಡುವುದು. ಪ್ರಮಾದಜನ್ಯ ದೋಷಗಳ ಪರಿಹಾರವು ನಿಷಿದ್ಧಿಯು.

ಅಂಗಪ್ರವಿಷ್ಟ ಅರ್ಥಧಿಕಾರವು ಪ್ರಧಾನವಾಗಿ ಹನ್ನೆರಡು (ದ್ವಾದಶ) ವಿಭಾಗಗಳುಳ್ಳದ್ದಾಗಿದೆ. ಇದರ ಕರ್ತೃತ್ವವನ್ನು ಎರಡು ಪ್ರಕಾರದಿಂದ ಹೇಳಬೇಕಾಗಿದೆ. ಒಂದನಯದಾಗಿ ಅರ್ಥಕರ್ತೃ, ಎರಡನೆಯದಾಗಿ ಭಾಷಾನಿಬದ್ಧರೂಪದ ದ್ರವ್ಯ ಶ್ರುತಕ್‌ರ್ತೃ.

ಅಷ್ಟದಶದೋಷರಹಿತ ಆಪ್ತ ಭಗವದರ್ಹಂತ ಸಾರ್ವಜ್ಞತೀರ್ಥಂಕರ ಪರಮ ಜಿನೇಂದ್ರನು ಅರ್ಥಕರ್ತೃವು೩ ಭಗವದರ್ಹತ್ಸರ್ವಜ್ಞರೂಪಿ ಹಿಮಗಿರಿಯಿಂದ ಪ್ರವಹಿಸಿದ ವಚನರೂಪಿ ಗಂಗೆಯ ಅರ್ಥರೂಪಿ ಜಲದಿಂದ ಪ್ರಕ್ಷಾಲಿತವಾದ ಅಂತಃಕರಣರಾದ ಬುದ್ದ್ಯತಿಶಯ ಋದ್ಧಿಸಂಪನ್ನರಾದ (ಭಾವಶ್ರುತಸಂಪನ್ನರಾದ) ಗಣಧರರಿಂದ ರಚಿತವಾದ ಆಚಾರಾಂಗಾದಿ ದ್ವಾದಶಭೇದದ ಗ್ರಥವು ದ್ರವ್ಯಶ್ರುತವು (೧) ಆಚಾರ, (೨)ಸೂತ್ರಕೃತ, (೩) ಸ್ಥಾನ, (೪) ಸಮವಾಯ, (೫) ವ್ಯಾಖ್ಯಾಪ್ರಜ್ಞಪ್ತಿ (೬) ಜ್ಞಾತೃಧರ್ಮಕಥಾ, (೭) ಉಪಾಸಕಾಧ್ಯಯನ (೮) ಅಂತಕೃದ್ದಶಾ (೯) ಅನುತ್ತರೌಪಪಾದಿಕದಶಾ, (೧೦) ಪ್ರಶ್ನವ್ಯಾಕರಣ, (೧೧) ವಿಪಾಕಸೂತ್ರ ಮತ್ತು (೧೨) ದೃಷ್ಟಿವಾದ ಇವು ಹನ್ನೆರಡು(ದ್ವಾದಶ ಭೇದದ) ಅಂಗಗಳು.

೧. ಆಚಾರ (ಆಯಾರ) : ಅಂಗವು ೧೮೦೦೦ ಪದಗಳಲ್ಲಿ, ಹೇಗೆ ನಡೆಯಬೇಕು, ಹೇಗೆ ನಿಲ್ಲಬೇಕು, ಹೇಗೆ ಕುಳಿತುಕೊಳ್ಳಬೇಕು, ಹೇಗೆ ಮಲಗಬೇಕು, ಹೇಗೆ ಆಹಾರ ಸೇವಿಸಬೇಕು, ಹೇಗೆ ಮಾತನಾಡಬೇಕು, ಹೇಗೆ ಪಾಪಂಬಧವಾಗುವುದಿಲ್ಲ, (ಎಂಬ ಗಣಧರರ ಪ್ರಶ್ನೆಗಳಿಗೆ ಉತ್ತರವಾಗಿ) ಯತ್ನಪೂರ್ವಕ (ಎಚ್ಚರಿಕೆಯಿಂದ) ನಡೆಯಬೇಕು, ಯತ್ನಪೂರ್ವಕ ನಿಲ್ಲಬೇಕು,ಯತ್ನಪೂರ್ವಕ ಕುಳಿತುಕೊಳ್ಳಬೇಕು, ಯತ್ನಪೂರ್ವಕ ಮಲಗಬೇಕು, ಯತ್ನಪೂರ್ವಕ ಆಹಾರ ಸೇವಿಸಬೇಕು ಯತ್ನಪೂರ್ವಕ ಮಾತನಾಡಬೇಕು. ಈ ಪ್ರಕಾರದ  ಆಚಾರದಿಂದ ಪಾಪಬ್ಧ್ಮವಾಗುವುದಿಲ್ಲ ಎಂದು ಮುಂತಾದುವನ್ನು ನಿರೂಪಿಸುತ್ತದೆ.೪

೨. ಸೂತ್ರಕೃತ (ಸೂದಯದ) : ಅಂಗವು ೩೬,೦೦೦ ಪದಗಳಲ್ಲಿ ಜ್ಞಾನ ವಿನಯ, ಪ್ರಜ್ಞಾಪನಾ, ಕಲ್ಪ್ಯಾಕಲ್ಪ್ಯ, ವೇದೋಸ್ಥಪನಾ ಮತ್ತು ವ್ಯವಹಾರ ಧರ್ಮ ಕ್ರಿಯೆಗಳ ಪ್ರರೂಪಣೆ ಮಾಡುವುದು, ಹಾಗೆಯೇ ಸ್ವಸಮಯ ಮತ್ತು ಪರಸಮಯಗಳ ಪ್ರರೂ ಪಣೆಯನ್ನೂ ಮಾಡುವುದು.

೩. ಸ್ಥಾನ (ಠಾಣ) : ಅಂಗವು ೪೨,೦೦೦ ಪದಗಳಲ್ಲಿ ಅನೇಕ ಆಶ್ರಯಗಳುಳ್ಳ ಅರ್ಥಗಳ ನಿರ್ಣಯ ಮಾಡುವುದು : ಉದಾಹರಣೆಯಾಗಿ ಮಹಾನ್ ಆತ್ಮನು ಎಂದರೆ  ಜೀವನು ನಿರಂತರವಾಗಿ ಚೈತನ್ಯರೂಪಧರ್ಮದ ಉಪಯೋಗದ ಅಪೇಕ್ಷೆಯಿಂದ ಒಂದು ಪ್ರಕಾರದವನಾಗಿದ್ದಾನೆ. ಜ್ಞಾನ ಮತ್ತು ದರ್ಶನ ಭೇದಗಳ ಅಪೇಕ್ಷೆಯಿಂದ ಎರಡು ಪ್ರಕಾರವಾಗಿದ್ದಾನೆ. ಇತ್ಯಾದಿ.೫

೪. ಸಮವಾಯ : ಅಂಗವು ೧,೬೪,೦೦೦ ಪದಗಳಲ್ಲಿ ಎಲ್ಲ ಪದಾರ್ಥಗಳ ಸಮವಾಯವನ್ನು ವರ್ಣೀಸುವುದು. ಆ ಸಮವಾಯವು ನಾಲ್ಕು ಪ್ರಕಾರ; ಅವು ದ್ರವ್ಯ–ಕ್ಷೇತ್ರ–ಕಾಲ–ಭಾವಸಮವಾಯಗಳು. ಅಲ್ಲಿ ಧರ್ಮಾಸ್ತಿಕಾಯ, ಅಧರ್ಮಾಸ್ತಿಕಾಯ, ಲೋಕಾ ಕಾಶ, ಮತ್ತು ಏಕಜೀವಪ್ರದೇಶಗಳು ಸಮ  ಎನ್ನುವುದು ದ್ರವ್ಯಸಮವು. ಕ್ಷೇತ್ರಸಮ ವಾಯದಿಂದ ಪ್ರಥಮನರಕದ ಪ್ರಥಮ ಪಟಲದ ಸೀಮಂತಕ ಎಂಬ ಇಂದ್ರಕಬಿಲ, ಎರಡುವರೆ ದ್ವೀಪ ಪ್ರಮಾಣದ ಮನುಷ್ಯ ಕ್ಷೇತ್ರ, ಸೌಧರ್ಮ– ಐಶಾನಕಲ್ಪ ಸ್ವರ್ಗಗಳ ಮುವ್ವತ್ತೊಂದು ವಿಮಾನ ಪ್ರಸ್ತಾರಗಳಲ್ಲಿ ಒಂದನೆಯದಾದ ಋತ ಎಂಬ (ಉಡು) ಇಂದ್ರಕವಿಮಾನ ಮತ್ತು ಸಿದ್ಧ ಕ್ಷೇತ್ರಸಮ ಎಂಬುದು

ಕ್ಷೇತ್ರಸಮವಾಯ. ಸಮಯ ದೊಡನೆ ಸಮಯ ಮುಹೂರ್ತದೊಡನೆ ಮೂಹೂರ್ತ ಸಮ ಅಥವಾ ಉತ್ಸರ್ಪಿಣಿ ಮತ್ತು ಅವಸರ್ಪಿಣಿಗಳು ಕಾಲದ ಪ್ರಮಾಣದಿಂದ ಸಮ ಎಂಬಿತ್ಯಾದಿ ಕಾಲಸಮವಾಯ. ಕ್ಷಾಯಿಕಸಮ್ಯಕ್ತ್ವ, ಕೇವಲಜ್ಞಾನ, ಕೇವಲದರ್ಶನ ಮತ್ತು ಯಥಾಖ್ಯಾತ ಚಾರಿತ್ರಗಳ ಭಾವವು ಅದರ ಅನುಭವಕ್ಕೆ ಅನಂತಪ್ರಮಾಣದಿಂದ ಸಮಾನವಿರುವುದರಿಂದ ಭಾವಸಮವಾಯವು.

೫. ವ್ಯಾಖ್ಯಾಪ್ರಜ್ಞಪ್ತಿ . (ವಿಯಾಹಪಣ್ಣತ್ತಿ) : ಅಂಗವು ೨,೨೮,೦೦೦ ಪದಗಳಲ್ಲಿ ಜೀವವು ಇದೆಯೇನು, ಇಲ್ಲವೇನು, ಒಂದೇ ಆಗಿದೆಯೋ, ಅನೇಕವೋ, ನಿತ್ಯವಾದುದೆ, ಅನಿತ್ಯವೆ? ಇವೇ ಮೊದಲಾದ ಗಣಧರರು ಕೇಳಿದ ಅರವತ್ತು ಸಾವಿರ ಪ್ರಶ್ನೆಗಳಿಗೆ ವ್ಯಾಖ್ಯಾನ ಮಾಡುವುದು.

೬.ಜ್ಞಾತೃಕಥಾ (ಣಾಹಧಮ್ಮಕಹಾ) : ಅಂಗವು ೫,೫೬,೦೦೦ ಪದಗಳಲ್ಲಿ ಸುತ್ತ ಪೌರುಸೀ ವಿಧಿಯಲ್ಲಿ (ಸ್ವಾಧ್ಯಾಯಪ್ರಸ್ಥಾಪನೆ ಆಗಲೆಂದು) ತೀರ್ಥಂಕರರ ಧರ್ಮ ದೇಶನೆ, ಗಣಧರದೇವನ ಸಂದೇಹ ಪರಿಹಾರ ವಿಧಾನ ಹಾಗೂ ಅನೇಕ ಪ್ರಕಾರದ ಕಥೆಗಳನ್ನು ಮತ್ತು ಉಪಕಥೆಗಳನ್ನು ನಿರೂಪಿಸುವುದು.

೭,ಉಪಸಕಾಧ್ಯಯನ (ಉವಾಸಯಜ್ಝಯಣ) : ಅಂಗವು ೧೧,೭೦,೦೦೦ ಪದಗಳಲ್ಲಿ ದಾರ್ಶನಿಕ, ವ್ರತಿಕ, ಸಾಮಾಯಿಕೀ, ಪ್ರೋಷಧೋಪವಾಸೀ, ಸಚಿತ್ತವಿರತ, ರಾತ್ರಿಭುಕ್ತಿ ವಿರತ, ಬ್ರಹ್ಮಚಾರೀ, ಆರಂಭವಿರತ, ಪರಿಗ್ರಹವಿರತ, ಅನುಮತಿವಿರತ ಮತ್ತು ಉದ್ದಿಷ್ಟವಿರತ ಎಂಬ ಹನ್ನೊಂದು ನೆಲಯೞ ಶ್ರಾವಕರ ಲಕ್ಷಣ, ಆ ವ್ರತಗಳ ಧಾರಣ ವಿಧಾನ ಮತ್ತು ಅವುಗಳ ಆಚರಣೆ ವಿಧಾನವನ್ನೂ ವರ್ಣಿಸುವುದು.

೮. ಅಂತಕೃದ್ದಶಾ (ಅಂತಯಡದಸಾ) : ಅಂಗ–ಸಂಸಾರಭ್ರಮಣೆಯನ್ನು ಅಂತಗೊಳಿಸಿದರು 'ಅಂತಕೃತ್' ಗಳು. ಈ ಅಂಗವು ೨೩,೨೮೦೦೦ ಪದಗಳಲ್ಲಿ ಋಷಭಾದಿ ಪ್ರತಿಯೊಬ್ಬ ತೀರ್ಥಂಕರ ತೀರ್ಥಕಾಲಗಳಲ್ಲಿ ದಾರುಣವಾದ ಬಹುವಿಧ ಉಪಸರ್ಗಗಳನ್ನು ಸಹಿಸಿ ಪ್ರಾತಿಹಾರ್ಯ ಹೊಂದಿ ನಿರ್ವಾಣ ಹೊಂದಿದ ಹತ್ತು ಹತ್ತು ಮುನಿಗಳ ವರ್ಣನೆ ಮಾಡುವುದು. ಅಂತಿಮ ತೀರ್ಥಂಕರ ವರ್ಧಮಾನ ಜಿನೇಂದ್ರನ ತೀರ್ಥಕಾಲದ ಹತ್ತು ಅಂತಕೃದ್ ಗಳು : ನಮಿ ಮತಂಗ, ಸೋಮಿಲ,

ರಾಮಪುತ್ರ, ಸುದರ್ಶನ ; ಯವಲೀಕ, ವಲೀಕ, ಕಿಷ್ಕಂಬಲ, ಪಾಲ ಮತ್ತು ಅಂಬಷ್ಟಪುತ್ರ. 'ಅಂತಕೃದ್ದಶಾ' ಎಂಬುದನ್ನು 'ಅಂತಕೃದ್ ಗಳ ದಶೆ' ಎಂದೂ ಹೇಳಬಹುದು.

೯. ಅನುತ್ತರೌಪಪಾದಿಕದಶಾ (ಅಣುತ್ತರೋವವಾದಿಯದಸಾ) ಅಂಗ: ಉಪಪಾದ ಜನ್ಮದ ಪ್ರಯೋಜನವುಳ್ಳವರು ಔಪಪಾದಿಕರು, ವಿಜಯ, ವೈಜಯಂತ, ಜಯಂತ, ಅಪರಾಜಿತ ಮತ್ತು ಸರ್ವಾರ್ಥಸಿದ್ದಿ. ಇವು ಪಂಚಾನುತ್ತರ ವಿಮಾನಗಳು, ಅನುತ್ತರಗಳಲ್ಲಿ ಉಪಪಾದಜನ್ಮ ಪಡೆದವರು ಅನುತ್ತರೌಪಪಾದಿಕರು. ಈ ಅಂಗವು ೯೨,೪೦೦೦ ಪದಗಳಲ್ಲಿ ಋಷಭಾದಿ ಪ್ರತಿಯೊಬ್ಬ ತೀರ್ಥಂಕರರ ತೀರ್ಥಕಾಲದಲ್ಲಿ ದಾರುಣ ಉಪಸರ್ಗಗಳನ್ನು ಜಯಿಸಿ ವಿಜಯಾದಿ ಅನುತ್ತರಗಳಲ್ಲಿ ಜನಿಸಿದ ಹತ್ತು ಹತ್ತು ಮುನಿಗಳ ವರ್ಣನೆ ಮಾಡುವುದು. ವರ್ಧಮಾನ ತೀರ್ಥಂಕರನ ತೀರ್ಥಕಾಲದ ಹತ್ತು ಅನುತ್ತರೌಪಪಾದಿಕರು : ಋಷಿದಾಸ, ಧನ್ಯ, ಸುನಕ್ಷತ್ರ, ಕಾರ್ತಿಕ, ನಂದ, ನಂದನ, ಶಾಲಿಭದ್ರ, ಅಭಯ, ವಾರಿಷೇಣ, ಚಿಲಾತಪುತ್ರ. 'ಅನುತ್ತರೌಪಪಾದಿಕದಶಾ' ಎಂಬುದಕ್ಕೆ ಅನುತ್ತರೌಪಪಾದಿಕರ ದಶೆ ಎಂದೂ ಹೇಳಬಹುದು.

೧೦. ಪ್ರಶ್ನವ್ಯಾಕರಣ (ಪಣ್ಹವಾಯರಣ) : ಅಂಗವು ೯೩,೧೬,೦೦೦ ಪದಗಳಲ್ಲಿ ಆಕ್ಷೇಪಣೀ, ವಿಕ್ಷೇಪಣೀ, ಸಂವೇದನೀ ಮತ್ತು ನಿರ್ವೇದನೀ ಎಂಬ ನಾಲ್ಕು ಪ್ರಕಾರದ ಕಥೆಗಳ ಹಾಗೂ ಭೂತ , ಭವಿಷ್ಯತ್ ಮತ್ತು ವರ್ತಮಾನ ಕಾಲ ಸಂಬಂಧಿ ಧನ, ಧಾನ್ಯ, ಲಾಭ, ಅಲಾಭಾ, ಜೀವಿತ, ಮರಣ, ಜಯ ಮತ್ತು ಪರಾಜಯಗಳನ್ನು ಕುರಿತ ಪ್ರಶ್ನೆಗಳ ವರ್ಣನೆ ಮಾಡುವುದು. ಅಲ್ಲಿ ಆಕ್ಷೇಪಣೀ ಕಥೆಯು ಆರು ದ್ರವ್ಯ ನವಪದಾರ್ಥಗಳ ಸ್ವರೂಪವನ್ನು (ಏಕಾಂತ) ದೃಷ್ಟಾಂತರ ಮತ್ತು ಅನ್ಯ ಸಮಯ (ಅನ್ಯತತ್ತ್ವ)ಗಳ ನಿರಾಕರಣಪೂರ್ವಕ ಶುದ್ಧಿಮಾಡಿ ನಿರೂಪಿಸುವುದು. ವಿಕ್ಷೇಪಣೀಯು ಮೊದಲಿಗೆ ಪರಸಮಯದ ಮೂಲಕ ಸ್ವಸಮಯದ ದೂಷಣೆ ಮಾಡಿ ಬಳಿಕ ಪರ ಸಮಯದ ಏಕಂತದೃಷ್ಟಿಗಳನ್ನು ಶುದ್ಧಿಗೊಳಿಸುತ್ತಾ ಸ್ವಸಮಯವನ್ನು ಸ್ಥಾಪನೆ ಮಾಡಿ ಷಡ್ ದ್ರವ್ಯ ಮತ್ತು ನವಪದಾರ್ಥಗಳ ಪ್ರರೂಪಣೆ ಮಾಡುವುದು. ಸಂವೇದನಿಯು ಪುಣ್ಯಫಲ ವರ್ಣನೆ ಮಾಡುವ ಕಥೆ ; ಹಾಗಾದರೆ ಪುಣ್ಯಫಲಗಳಾವುವು ಎಂಬುದು ಪ್ರಶ್ನೆ; ತೀರ್ಥಂಕರ, ಗಣಧರ ಋಷಿ, ಚಕ್ರವರ್ತಿ, ಬಲದೀವ, ವಾಸುದೇವ, ಸುರ, ವಿದ್ಯಾಧರ, ಋದ್ಧಿಗಳು ಪುಣ್ಯಫಲಗಳು, ನಿರ್ವೇದನಿಯು

ಪಾಪಫಲದ ವರ್ಣನೆ ಮಾಡುವ ಕಥೆ. ಪಾಪಫಲಗಳಾವುವು ಎಂಬುದು ಪ್ರಶ್ನೆ : ನರಕ, ತಿರ್ಯಂಚ, ಕುಮಾನುಷ ಯೋನಿಗಳಲ್ಲಿ ಜನ್ಮ, ಜರಾ (ಮುಪ್ಪು), ಮರಣ, ವೇದನಾ, ದಾರಿದ್ರ್ಯ ಮುಂತಾದವು ಪಾಪದ ಫಲಗಳು–ಸಂಸಾರ, ಶರೀರ, ಭೋಗಗಳಲ್ಲಿ ವೈರಾಗ್ಯ ಮೂಡಿಸುವ ಕಥೆ ನಿರ್ವೇದನೀ ಕಥೆ ಎಂಬುದಾಗಿಯೂ ಹೇಳಬಹುದು೭.

೧೧. ವಿಪಾಕಸೂತ್ರ (ವಿವಾಗ ಸುತ್ತ) : ಅಂಗವು ೧,೮೪, ೦೦, ೦೦೦ ಪದಗಳಲ್ಲಿ ಸುಕೃತ ಮತ್ತು ದುಃಕೃತಗಳ ಎಂದರೆ ಪುಣ್ಯಪಾಪಗಳ ವಿಪಾಕವನ್ನು ವರ್ಣನೆ ಮಾಡುವುದು.

ಹನ್ನೊಂದು ಅಂಗಗಳ ಒಟ್ಟು ಪದಸಂಖ್ಯೆ ೮,೧೫,೦೨,೦೦೦

೧೨. ದೃಷ್ಟಿವಾದ (ದಿಟ್ಠಿವಾದ): ಅಂಗ ಇದರಲ್ಲಿ ಕೌತ್ಕಲ, ಕಾಣೇವಿದ್ಧಿ, ಕೌಶಿಕ, ಹರಿಶ್ಮಶ್ರು, ಮಾಂಛಪಿಕ, ರೋಮಶ, ಹಾರೀತ, ಮುಂಡ, ಅಶ್ವಲಾಯನ ಮುಂತಾದವರ ೧೮೦ ಕ್ರಿಯಾವಾದ ದೃಷ್ಟಿಗಳು, ಮರೀಚಿ(–ಕುಮಾರ), ಕಪಿಲ, ಉಲೂಕ,ಗಾರ್ಗ್ಯ, ವ್ಯಾಘ್ರಭೂತಿ, ವಾದ್ಧಲಿ, ಮಾಠರ, ಮೌದ್ಗಲ್ಯ ಮುಂತಾದವರ ೮೪ ಅಕ್ರಿಯಾವಾದಗಳು, ಸಾಕಲ್ಯ, ವಲ್ಕಲ, ಕುಥುಮಿ, ಸಾತ್ಯಮುಗ್ರಿ, ನಾರಾಯಣ, ಕಠ (ಪಾಠಭೇದ–ಕಣ್ವ), ಮಾಧ್ಯಂದಿನ, ಮೌದ, ಪೈಪ್ಪಲಾದ, ಬಾದರಾಯಣ, ಅಂಬಷ್ಠಿ (ಪಾ.ಭೇ.೧. ಅಂಬರೀಶ), ಕೃತ್, (ಪಾ. ಭೇ. ಸ್ವಷ್ಠಿಕೃತ್,ಸ್ವೆಷ್ಠಿಕೃತ್), ಔವಿಕಾಯನ (ಪಾ.ಭೇ. ಐತಿಕಾಯನ), ವಸು, ಜೈಮಿನಿ ಮುಂತಾದವರ ೬೭ ಅಜ್ಞಾನಿಕ ದೃಷ್ಟಿಗಳು, ವಶಿಷ್ಠ, ಪರಾಶಾರ, ಜನುಕರ್ಣಿ ( ಪಾ.ಭೇ.ಜತುಕರ್ಣ), ವಾಲ್ಮೀಕಿ, ಕಾಮಹರ್ಷಿಣಿ (ಪಾ.ಭೇ.ರೋಮಹರ್ಷಣೀ), ಸತ್ಯದತ್ತ, ವ್ಯಾಸ, ಏಲಾಪುತ್ರ, ಔಪಮನ್ಯವ, ಐಂದ್ರದತ್ತ, ಅಯಸ್ಥೂಣರೇ ಮೊದಲಾದವರ ೩೨ ವೈನಯಿಕ ದೃಷ್ಟಿಗಳು : ಈ ೩೬೩ ದೃಷ್ಟಿಗಳ ಪ್ರರೂಪಣೆ ಮತ್ತು ನಿಗ್ರಹವಿದೆ.

ಈ ದೃಷ್ಟಿವಾದಾಂಗವು (೧) ಪರಿಕರ್ಮ (ಪರಿಯಮ್ಮ) (೨) ಸೂತ್ರ (ಸುತ್ತ), (೩) ಪ್ರಥಮಾನುಯೋಗ, (ಪಢಮಾಣೀಯೋಗ), (೪) ಪೂರ್ವಗತ (ಪುವ್ವಗಯ) ಮತ್ತು (೫) ಚೂಲಿಕಾ (ಚೂಲಿಯಾ)ಎಂಬ ಐದು ಅರ್ಥಾಧಿಕಾರ ಭಾಗಗಳುಳ್ಳದ್ದಾಗಿದೆ.

೧. ಪರಿಕರ್ಮವು ಚಂದ್ರಪ್ರಜ್ಞಪ್ತಿ, ಸೂರ್ಯಪ್ರಜ್ಞಪ್ತಿ, ಜಂಬೂದ್ವೀಪ ಪ್ರಜ್ಞಪ್ತಿ, ದ್ವೀಪಸಾಗರ ಪ್ರಜ್ಞಪ್ತಿ ಮತ್ತು ವ್ಯಾಖ್ಯಾಪ್ರಜ್ಞಪ್ತಿ ಎಂಬ ಐದು ವಿಭಾಗಗಳುಳ್ಳದ್ದಾಗಿದೆ. ಇಲ್ಲಿ (೧) ಚಂದ್ರ ಪ್ರಜ್ಞಪ್ತಿಯು ೩೬,೦೫,೦೦೦ ಪದಗಳಲ್ಲಿ ಚಂದ್ರನ ಆಯುಷ್ಯ, ಪರಿವಾರ, ಋದ್ಧಿ, ಗತಿ ಮತ್ತು ಬಿಂಬದ ಎತ್ತರ ಮುಂತಾದುವನ್ನು ವರ್ಣಿಸುತ್ತದೆ. (೨) ಸೂರ್ಯ ಪ್ರಜ್ಞಪ್ತಿಯು ೫,೦೩,೦೦೦ ಪದಗಳಲ್ಲಿ ಸೂರ್ಯನ ಆಯುಷ್ಯ, ಭೋಗ, ಉಪಭೋಗ, ಪರಿವಾರ, ಋದ್ಧಿ, ಗತಿ , ಬಿಂಬದ ಎತ್ತರ, ದಿನ, ಕಿರಣ ಪ್ರಕಾಶಗಳ ವರ್ಣನೆ ಮಾಡುವುದು. (೩)ಜಂಬೂದ್ವೀಪದ ಪ್ರಜ್ಞಪ್ತಿಯು ೩, ೨೫, ೦೦೦ ಪದಗಳಲ್ಲಿ ಜಂಬೂದ್ವೀಪದ ಬೋಗಬೂಮಿ ಮತ್ತು ಕರ್ಮಭೂಮಿಗಳ ನಾನಾವಿಧದ ಮನುಷ್ಯರ ಮತ್ತಿತರ (ತಿರ್ಯಂಚ)ರ, ಪರ್ವತ, ದ್ರಹ (ಆಳವಾದ ಸರೋವರ), ನದಿ, ವೇದಿಕೆ, ವರ್ಷ, ಆವಾಸ, ಅಕೃತ್ರಿಮ– ಜಿನಾಲಯ ಮುಂತಾದವುಗಳ ವರ್ಣನೆ ಮಾಡುವುದು. (೪) ದ್ವೀಪಸಾಗರ ಪ್ರಜ್ಞಪ್ತಿಯು ೫೨,೩೬,೦೦೦ ಪದಗಳಲ್ಲಿ ಉದ್ಧಾರಪಲ್ಯ ಪ್ರಮಾಣ ದಿಂದ ದ್ವೀಪಸಾಗರ ಪ್ರಮಾಣ ಹಾಗೂ ದ್ವೀಪಸಾಗರಗಳೊಳಗಿನ ನಾನಾ ಪ್ರಕಾರದ ಅನ್ಯ ಪದಾರ್ಥಗಳ ವರ್ಣನೆ ಮಾಡುವುದು. (೫) ವ್ಯಾಖ್ಯಾಪ್ರಜ್ಞಪ್ತಿಯು ೮೪,೩೬,೦೦೦ ಪದಗಳಲ್ಲಿ ರೂಪಿಅಜೀವದ್ರವ್ಯ–ಪುದ್ಗಲ, ಅರೂಪೀ ಅಜೀವದ್ರವ್ಯ–ಧರ್ಮ, ಅಧರ್ಮ, ಆಕಾಶ, ಕಾಲಗಳಲ ಭವಸಿದ್ಧಿಕ ಜೀವ–ಅಭವಸಿದ್ಧಿಕಲ ರಾಶಿಯನ್ನು ವರ್ಣನೆ ಮಾಡುವುದು.

೨. ಸೂತ್ರವು ೮೮,೦೦,೦೦೦ ಪದಗಳಲ್ಲಿ ಜೀವನು ಅಬಂಧಕನಾಗಿದ್ದಾನೆ, ಅವಲೇಪಕನಾಗಿದ್ದಾನೆ, ಅಕರ್ತೃವಾಗಿದ್ದಾನೆ, ಅಭೋಕ್ತೃವಾಗಿದ್ದಾನೆ, ನಿರ್ಗುಣನಾಗಿದ್ದಾನೆ, ಸರ್ವಗತನಾಗಿದ್ದಾನೆ, ಅಣುಮಾತ್ರನಾಗಿದ್ದನೆ, ನಾಸ್ತಿಸ್ವರೂಪನಾಗಿದ್ದಾನೆ, ಅಸ್ತಿಸ್ವರೂಪನಾಗಿದ್ದನೆ, ಜೀವನು ಪೃಥಿವೀ ಆದಿ ಭೂತಗಳ ಸಮುದಾಯ ರೂಪದಿಂದ ಉತ್ಪನ್ನನಾಗುವನು, ನಿಶ್ಚೇತನನಾಗಿದ್ದಾನೆ. ಜ್ಞಾನದ ವಿನಾ ಆತ್ಮನು ಸಚೇತನಾಗಿದ್ದಾನೆ, ನಿತ್ಯನಾಗಿದ್ದಾನೆ, ಅನಿತ್ಯನಾಗಿದ್ದಾನೆ, ಎಂದು ಮುಂತಾಗಿ (ಕ್ರಿಯಾವಾದೀ, ಅಕ್ರಿಯಾವಾದೀ, ಅಜ್ಞಾನವಾದೀ ಮತ್ತು ವಿನಯವಾದಿಗಳ ೩೬೩ ಮತಗಳನ್ನು ಪೂರ್ವಪಕ್ಷ ರೂಪದಿಂದ)ೀ ವರ್ಣನೆ ಮಾಡುವುದು. ತ್ರೈರಾಶಿಕ, ನಿಯತಿವಾದ, ವಿಜ್ಞಾನವಾಧ, ಶಬ್ದವಾದ, ಪ್ರಧಾನವಾದ, ದ್ರವ್ಯವಾದ ಮತ್ತು ಪುರುಷವಾದಗಳೂ ಸೇರಿವೆ.

೩. ಪ್ರಥಮಾನುಯೋಗ– ಇದು ೫೦೦೦ ಪದಗಳಲ್ಲಿ ಪುರಾಣವನ್ನು ವರ್ಣಿಸುವುದು. ಎಲ್ಲ ಜಿನೇಂದ್ರರಿಂದ ಹನ್ನೆರಡು ಪ್ರಕಾರದ  ಪುರಾಣಗಳು ಜಗತ್ತಿನಲ್ಲಿ ಉಪದೇಶಿಸಲ್ಪಟ್ಟಿವೆ. ಆ ಎಲ್ಲ ಪುರಾಣಗಳು ಜಿನವಂಶ ಮತ್ತು ರಾಜವಂಶಗಳ ವರ್ಣನೆ ಮಾಡುತ್ತವೆ: ಮೊದಲನೆಯದು ಅರಿಹಂತರದು ಎಂದರೆ ತೀರ್ಥಂಕರರದು, ಎರಡನೆಯದು ಚಕ್ರವರ್ತಿಗಳದು, ಮೂರನೆಯದು ವಿದ್ಯಾಧರರದು ನಾಲ್ಕನೆಯದು ವಾಸುದೇವರದು, ಐದನೆಯದು ಚಾರಣ ವಂಶದ್ದು, ಆರನೆಯದು ಪ್ರಜ್ಞಾಶ್ರಮಣರದು, ಏಳನೆಯದು ಕುರುವಂಶದ್ದು, ಎಂಟನೆಯದು ಹರಿವಂಶದ್ದು. ಒಂಭತ್ತನೆಯದು ಇಕ್ಷ್ವಾಕುವಂಶದ್ದು, ಹತ್ತನೆಯದು ಕಾಶ್ಯಪವಂಶದ್ದು, ಹನ್ನೊಂದನೆಯದು ವಾದಿಗಳದ್ದು, ಹನ್ನೆರಡನೆಯದು ನಾಥವಂಶದ್ದು.ಸ್

೪. ಪೂರ್ವಗತ–ಇದು ೯೫೫೦೦೦೦೫ ಪದಗಳಲ್ಲಿ ಉತ್ಪಾದ, ವ್ಯಯ ಧ್ರುವತ್ವ ಮುಂತಾದವುಗಳ ವರ್ಣನೆ ಮಾಡುವುದು. (ಇದರ ವಿಸ್ತೃತ ವಿವರಣೆಯನ್ನು ಮುಂದೆ ಕೊಡಲಾಗಿದೆ).

೫. ಚೂಲಿಕಾ– ಇದು ಜಲಗತಾ, ಸ್ಥಲಗತಾ, ಮಾಯಾಗತಾ, ರೂಪಗತಾ ಮತ್ತು ಆಕಾಶಗತಾ ಎಂಬ ಐದು ಭಾಗಗಳನ್ನು ಉಳ್ಳದ್ದಾಗಿದೆ, (೧) ಜಲಗತಾ ಪ್ರಕಾರವು ೨,೦೯,೮೯,೨೦೦ ಪದಗಳಲ್ಲಿ ಜಲಗಮನ, ಜಲಸ್ತಂಭಕ್ಕೆ ಕಾರಣ ಮಂತ್ರ, ತಂತ್ರ, ತಪಶ್ಚರಣ ಮುಂತಾದುವನ್ನು ವರ್ಣಿಸುವುದು. (೨) ಸ್ಥಲಗತಾ ಪ್ರಕಾರವು ಅದೇ ೨.೦೯,೮೯,೨೦೦ ಪದಗಳಲ್ಲಿ ಭೂಮಿಗಮನ ಕಾರಣ ಮಂತ್ರ ತಂತ್ರ, ತಪಶ್ಚರಣಗಳನ್ನು ಹಾಗೂ ವಾಸ್ತುವಿದ್ಯೆ, ಭೂಮಿ ಸಂಬಂಧದ ಮತ್ತಿತರ ಶುಭಾಶುಭ ಕಾರಣಗಳನ್ನು ವರ್ಣಿಸುವುದು (೩) ಮಾಯಾಗತಾಪ್ರಕಾರವು ಅದೇ ೨,೦೯,೮೯,೨೦೦ ಪದಗಳಲ್ಲಿ ಇಂದ್ರಜಾಲವನ್ನು  (ಮುಂತಾದುವಕ್ಕೆ ಕಾರಣವಾಧ ಮಂತ್ರ, ತಂತ್ರ, ತಪಶ್ಚರಣಗಳನ್ನು ) ವರ್ಣಿಸುವುದು ೪. ರೂಪಗತಾ ಪ್ರಕಾರವು ಅದೇ ೨,೦೯,೮೯,೨೦೦ ಪದಗಳಲ್ಲಿ ಸಿಂಹ ಕುದುರೆ, ಜಿಂಕೆ ಮುಂತಾದ ರೂಪಗಳ ಆಕಾರಿಂದ ಪರಿಣಮನ ಹೊಂದಲು ಕಾರಣವಾದ ಮಂತ್ರ, ತಂತ್ರ, ತಪಶ್ಚರಣಗಳನ್ನು ಹಾಗೂ ಚಿತ್ರಕರ್ಮ, ಕಾಷ್ಠಕರ್ಮ, ಲೇಪ್ಯಕರ್ಮ, ಲೇಣ (ಗುಹೆ) ಕರ್ಮ ಇವೇ ಮುಂತಾದವುಗಳ ಲಕ್ಷಣವನ್ನೂ ವರ್ಣಿಸುವುದು. ೫. ಆಕಾಶಗತಾಪ್ರಕಾರವು ಅದೇ ೨,೦೯,೮೯,೨೦೦

ಪದಗಳಲ್ಲಿ ಆಕಾಶಗಮನಕ್ಕೆ ಕಾರಣವಾಗಿದ್ದ ಮಂತ್ರ, ತಂತ್ರ, ತಪಶ್ಚರಣಗಳನ್ನು ವರ್ಣಿಸುವುದು, ಚೂಲಿಕಾದ ಒಟ್ಟು ಪದ ಸಂಖ್ಯೆ ೧೦೪೯೩೬೦೦೦.

ಪೂರ್ವಗತದ ವಿವರಣೆ– ಪೂರ್ವಗತವು ದೃಷ್ಟಿವಾದಾಂಗದ ನಾಲ್ಕನೆಯ ಭೇದ. ಇದರಲ್ಲಿ ಮುಂದಿನ ೧೪ ಅರ್ಥಾಧಿಕಾರಗಳಿವೆ– (೧) ಉತ್ಪಾದಪೂರ್ವ, (೨)ಅಗ್ರಾಯಣೀಯಪೂರ್ವ(೩) ವೀರ್ಯಾನುಪ್ರವಾದಪೂರ್ವ (೪) ಅಸ್ತಿನಾಸ್ತಿಪ್ರವಾದಪೂರ್ವ (೫) ಜ್ಞಾನಪ್ರವಾದ ಪೂರ್ವ (೬) ಸತ್ಯಪ್ರವಾದಪೂರ್ವ (೭) ಆತ್ಮಪ್ರವಾದಪೂರ್ವ, (೮) ಕರ್ಮಪ್ರವಾದ ಪೂರ್ವ, (೯) ಪ್ರತ್ಯಾಖ್ಯಾನಪೂರ್ವ, (೧೦) ವಿದ್ಯಾನುಪ್ರವಾದ ಪೂರ್ವ, (೧೧) ಕಲ್ಯಾಣ (ನಾಮಧೇಯ) ಪೂರ್ವ, (೧೨) ಪ್ರಾಣಾವಾಯಪೂರ್ವ, (೧೩) ಕ್ರಿಯಾವಿಶಾಲಪೂರ್ವ ಮತ್ತು (೧೪) ಲೋಕಬಿಂದುಸಾರ. ಈ ಪೂರ್ವಗತಗಳಲ್ಲಿ ಅನುಕ್ರಮವಾಗಿ, ೧೦, ೧೪, ೮, ೧೮, ೧೨, ೧೨, ೧೬, ೨೦, ೩೦, ೧೫, ೧೦, ೧೦, ೧೦, ೧೦, ವಸ್ತು ಎಂಬ ಹೆಸರಿನ ಅಧಿಕಾರಗಳಿವೆ, ಮತ್ತು ಒಂದೊಂದು ವಸ್ತುವಿನಲ್ಲಿಯೂ ಇಪ್ಪತ್ತು, ಇಪ್ಪತ್ತು ಪಾಹುಡ (ಪ್ರಾಭೃತ) ಎಂಬ ಹೆಸರಿನ ವಿಭಾಗಗಳಿವೆ ; ಈ ರೀತಿಯಿಂದ ಹದಿನಾಲ್ಕು ಪೂರ್ವಗಳಲ್ಲಿ ಒಟ್ಟು ೧೯೫ ವಸ್ತುಗಳೂ (೧೯೫ x ೨೦=) ೩೯೦೦ ಪಾಹುಡ (ಪ್ರಾಭೃತಕ)ಗಳೂ ಇವೆ. (ದಶಭಕ್ತಿ ಅಥವಾ ಕ್ರಿಯಾಕಲಾಪ, ಪ್ರಾಕೃತ ಶ್ರುತಭಕ್ತಿ– ಗಾಹೆ ೭ರಿಂದ ೧೦.)

೧. ಉತ್ಪಾದಪೂರ್ವ– (ಉಪ್ಪಾದಪುವ್ವ) : ಇದು ಹತ್ತು ವಸ್ತುಗಳಲ್ಲಿ ೩೦೦ ಪಾಹುಡಗಳನ್ನೊಳಗೊಂಡು ೧೦೦೦೦೦೦೦ ಪದಗಳಿಂದ, ಕಾಲ, ಪುದ್ಗಲ, ಜೀವಾದಿಗಳು ಯಾವಾಗ, ಎಲ್ಲಿ ಹೇಗೆ ಪರ್ಯಾಯರೂಪದಿಂದ ಉತ್ಪಾದ (ಉತ್ಪನ್ನ)ವಾಗುವುವು ಎಂಬುದನ್ನು ವರ್ಣನೆ ಮಾಡುವುದು ೧೦ ಜೀವ ಕಾಲ ಮತ್ತು ಪುದ್ಗಲಗಳ ಉತ್ಪಾದ, ವ್ಯಯ ಮತ್ತು ಧ್ರುವತ್ವಗಳನ್ನು ವರ್ಣಿಸುವುದು.೧೧

೨. ಅಗ್ರಾಯಣೀಯಪೂರ್ವ (ಅಗ್ಗೇಣಿಯಪುವ್ವ)– 'ಅಗ್ರ' ಎಂದರೆ ದ್ವಾದಶಾಂಗಗಳಲ್ಲಿ ಪ್ರಧಾನವಾದ ವಿಷಯದ 'ಅಯನ' ಎಂದರೆ ಜ್ಞಾನವು 'ಅಗ್ರಾಯಣ' ವು; ಇದನ್ನು ನಿರೂಪಿಸುವುದು ಅಗ್ರಾಯಣೀಯವು – ಇದು ೧೪ ವಸ್ತುಗಳಲ್ಲಿ ೮೦ ಪಾಹುಡಗಳನ್ನೊಳಗೊಂಡು

೯೬೦೦೦೦೦ ಪದಗಳಿಂದ ಕ್ರಿಯಾವಾದವೇ ಮೊದಲಾದುವುಗಳ ಪ್ರಕ್ರಿಯೆ; ಮತ್ತು ಅಂಗ ಮುಂತಾದವುಗಳ ಅಗ್ರಗಳೆನ್ನುವಂತೆ ಸ್ವಸಮಯ ವಿಷಯವನ್ನುಪ್ರರೂಪಣೆ ಮಾಡುವುದು. ೧೨

೩. ವೀರ್ಯಪ್ರವಾದಪೂರ್ವ–(ವಿರಿಯಾಣುಪವಾದಪುವ್ವ): ಇದು ೮ ವಸ್ತುಗಳಲ್ಲಿ ೧೬೦ ಪಾಹುಡಗಳನ್ನೊಗೊಂಡು ೭೦೦೦೦೦೦ ಪದಗಳಿಂದ ಆತ್ಮವೀರ್ಯ, ಪರವೀರ್ಯ, ಉಭಯಾವೀರ್ಯ, ಕ್ಷೇತ್ರವೀರ್ಯ, ಭವವೀರ್ಯ ಮತ್ತು ತಪವೀರ್ಯವನ್ನು ವರ್ಣಿಸುವುದು (ಧವಲಾವ್ಯಾಖ್ಯಾನ, ಪು. ೧೧೫). ಛದ್ಮಸ್ಥರ, ಕೇವಲಿ೧೩ ಗಳವೀರ್ಯ, ಸುರೇಂದ್ರ ದೈತ್ಯಾಧಿಪರ ಋದ್ಧಿಗಳು ನರೇಂದ್ರ, ಚಕ್ರಧರ ಮತ್ತು ಬಲದೇವರ ವೀರ್ಯಲಾಭಾ, ದ್ರವ್ಯಗಳ ಲಕ್ಷಣ, ಮತ್ತು ಸಮ್ಯಕ್ತ್ವ ಲಕ್ಷಣಗಳನ್ನು ವರ್ಣಿಸುವುದು.ಸ್

೪. ಅಸ್ತಿನಾಸ್ತಿಪ್ರವಾದ (ಅತ್ಥಿಣತ್ಥಿಪವಾದ)ಪೂರ್ವ. ಇದು ೧೮ ವಸ್ತುಗಳಲ್ಲಿ ೩೬೦ ಪಾಹುಡಗಳನ್ನೊಳಗೊಂಡು ೬೦೦೦೦೦೦ ಪದಗಳಲ್ಲಿ ಜೀವ ಮತ್ತು ಅಜೀವಗಳ ಅಸ್ತಿತ್ವ ಮತ್ತು ನಾಸ್ತಿತ್ವವನ್ನು ವರ್ಣಿಸುವುದು : ಹೇಗೆಂದರೆ– ಜೀವನು ಸ್ವದ್ರವ್ಯ– ಕ್ಷೇತ್ರ–ಕಾಲ–ಭಾವಗಳ ದೃಷ್ಟಿಯಿಂದ (೧) ಸ್ಯಾದಸ್ತಿ (ಒಂದು ಪ್ರಕಾರದಿಂದ ಇದ್ದಾನೆ) ಎನಿಸುವನು. ಪರದ್ರವ್ಯ–ಕ್ಷೇತ್ರ–ಕಾಲ–ಭಾವಗಳ ದೃಷ್ಟಿಯಿಂದ (೨) ಸ್ಯಾತ್ ನಾಸ್ತಿ (ಒಂದು ಪ್ರಕಾರದಿಂದ ಇಲ್ಲ) ಎನಿಸುವನು. ಸ್ವದ್ರವ್ಯಾದಿಗಳು ಮತ್ತು ಪರದ್ರವ್ಯಾದಿಗಳು ಈ ಎರಡು ದೃಷ್ಟಿಗಳಿಂದ ಕ್ರಮವಿಲ್ಲದೆ (ಒಂದಾದಮೇಲೊಂದರಂತಲ್ಲದೇ) ಯುಗಪತ್ ಎಂದರೆ ಒಟ್ಟಿಗೇ ಹೇಳಬೇಕೆಂದಲ್ಲಿ (೩) ಸ್ಯಾತ್ ಅವಕ್ತವ್ಯ (ಒಂದು ಪ್ರಕಾರದಿಂದ ಹೇಳಲಾಗದಂತಹವನು) ಎನಿಸುವನು. (೪) ಸ್ವದ್ರವ್ಯಾದಿ ಮೊದಲ ಧರ್ಮ ಮತ್ತು ಪರ ದ್ರವ್ಯಾದಿ ಎರಡನೆ ಧರ್ಮಗಳ ಪೂರ್ವಕ ಅನುಕ್ರಮದಿಂದ ಹೇಳಬೇಕೆಂದಲ್ಲಿ ಒಂದು ಸ್ಯಾತ್ ಅಸ್ತಿಚ ನಾಸ್ತಿಚ, ಪ್ರಕಾರದಿಂದ ಇದ್ದಾನೆ ಎಂದು ಹಾಗೂ ಇಲ್ಲ ಎಂದೂ ಎನಿಸುವನು. (೫) ಮೊದಲ ಧರ್ಮ ಮತ್ತು ಮೂರನೆಯ ಧರ್ಮಗಳಿಂದ ಕ್ರಮವಾಗಿ ಹೇಳಬೇಕೆಂದಲ್ಲಿ ಸ್ಯಾತ್ ಅಸ್ತಿಚ ಅವಕ್ತವ್ಯಃಚ, ಒಂದು ಪ್ರಕಾರದಿಂದ ಇದ್ದಾನೆ ಎಂದು ಹಾಗೂ ಹೇಳಲಾಗದಂತವನು ಎಂದೂ ಎನಿಸುವನು. (೬) ಎರಡು ಮತ್ತು ಮೂರನೇ ಧರ್ಮಗಳಿಂದ ಕ್ರಮವಾಗಿ ಹೇಳಬೇಕೆಂದಲ್ಲಿ ಸ್ಯಾತ್ ನಾಸ್ತಿಚ ಅವಕ್ತವ್ಯಃಚ ಒಂದು ಪ್ರಕಾರದಿಂದ ಇಲ್ಲ ಹಾಗೂ

ಹೇಳಲಾಗದಂತವನು ಎಂದೂ ಎನಿಸುವನು (೭) ಮೊದಲನೆಯ, ಎರಡನೆಯ ಮತ್ತು ಮೂರನೆಯ ಧರ್ಮಗಳಿಂದ ಕ್ರಮವಾಗಿ ಹೇಳಬೇಕೆಂದಲ್ಲಿ, ಸ್ಯಾತ್ ಅಸ್ತಿಚ, ನಾಸ್ತಿಚ ಅವಕ್ತವ್ಯಃಚ ಒಂದು ಪ್ರಕಾರದಿಂದ ಇದ್ದಾನೆ ಎಂದು, ಇಲ್ಲ ಎಂದು ಹಾಗೂ ಹೇಳಲಾಗದಂತವನು ಎಂದೂ ಎನಿಸಿಕೊಳ್ಳುವನು. ಈ ರೀತಿಯಿಂದ ಅಜೀವಾದಿಗಳನ್ನೂ ನಿರೂಪಿಸಬೇಕು.

೫. ಜ್ಞಾನಪ್ರವಾದ (ಣಾಣಪವಾದ) ಪೂರ್ವ ಇದು ೧೨ ವಸ್ತುಗಳಲ್ಲಿ ೨೪೦ ಪಹುಡಗಳನ್ನೊಳಗೊಂಡು ೯೯೯೯೯೯೯ ಪದಗಳಲ್ಲಿ ಐದು ಪ್ರಕಾರದ ಜ್ಞಾನ, ಮೂರು ಪ್ರಕಾರದ ಅಜ್ಞಾನಗಳನ್ನು ವರ್ಣಿಸುವುದು, ಹಾಗೂ ದ್ರವ್ಯಾಸ್ತಿಕ ಮತ್ತು ಪರ್ಯಾಯಾಸ್ತಿಕನಯಗಳ ಅಪೇಕ್ಷೆಯಿಂದ ಅನಾದಿ–ಅನಂತ, ಅನಾದಿ–ಅಂತಸಹಿತ, ಆದಿಸಹಿತ– ಅನಂತ, ಆದಿಸಹಿತ– ಅಂತಸಹಿತಗಳನ್ನು ವರ್ಣಿಸುವುದು. (ಧವಲಾ) ಐದೂ ಜ್ಞಾನಗಳ ಉತ್ಪತ್ತಿ, ವಿಷಯ ಮತ್ತು ಆಯತನ(=ಸ್ಥಾನ)ಗಳ, ಮತ್ತು ಜ್ಞಾನಿಗಳ, ಅಜ್ಞಾನಿಗಳ, ಹಾಗೂ ಇಂದ್ರಿಯಗಳ ಪ್ರಾಧಾನ್ಯತೆಯಿಂದ ವಿಭಾಗವನ್ನು ವರ್ಣಿಸುವುದು (ತ.ರಾ.ವಾ.)

೬. ಸತ್ಯಪ್ರವಾದಪೂರ್ವ–ಇದು ೧೨ ವಸ್ತುಗಳಲ್ಲಿ ೨೪೦ ಪಾಹುಡಗಳನ್ನೊಳಗೊಂಡು ೧,೦೦,೦೦,೦೦೬ಪದಗಳಲ್ಲಿ ವಾಗ್ಗುಪ್ತಿ , ವಾಕ್ ಸಂಸ್ಕಾರ ಕಾರಣಗಳಾದ ಎಂಟು ಶಿರ–ಕಂಠಾದಿ ಸ್ಥಾನಗಳು[೧೪], ಅಶುಭ(ಶುಭೇತರ) ವಾಕ್ ಪ್ರಯೋಗ, ಹನ್ನೆರಡು ಪ್ರಕಾರದ ಭಾಷೆ ವಕ್ತೃಗಳು, ಅನೇಕ ಪ್ರಕಾರದ ಮೃಷಾ (ದುರ್ಮಿಥ) ವಚನ, ಹತ್ತು ಪ್ರಕಾರದ ಸತ್ಯಸದ್ಭಾವ. ಇವುಗಳನ್ನು ನಿರೂಪಿಸುವುದು. ಅಸದ್ವಚನ ಆಡದಿರುವುದು, ಅಥವಾ ವಚನ ಸಂಯಮ ಅರ್ಥಾತ್ ಮೌನ ಧಾರಣೆಯು ವಾಗ್ಗುಪ್ತಿಯು; ಶಿರ, ಕಂಠ, ಹೃದಯ, ಜಿಹ್ವಾಮೂಲ (ನಾಲಿಗೆ ಮೂಲ), ದಂತ, ನಾಸಿಕ, ತಾಲು, ಮತ್ತು ಓಷ್ಠ (ತುಟಿ) ಇವು ಎಂಟು ವಚನ ಸಂಸ್ಕಾರ ಕಾರಣ ಸ್ಥಾನಗಳು. ಶುಭೇತರ ಲಕ್ಷಣ ವಾಕ್ ಪ್ರಯೋಗವೆಂಬುದು ಸುಗಮವಿದೆ. ಅಭ್ಯಾಖ್ಯಾನ, ಕಲಹ, ಪೈಶುನ್ಯ, ಅಬದ್ಧಪ್ರಲಾಪ, ರತಿ, ಅರತಿ, ಉಪಧಿ, ನಿಕೃತಿ, ಅಪ್ರಣತಿ, ಮೋಷ ಸಮ್ಯಗ್ದರ್ಶನ, ಮಿಥ್ಯಾದರ್ಶನ ವಚನವಿಧಗಳ ಭಾಷೆ ೧೨ ಪ್ರಕಾರವಾಗಿದೆ. 'ಇದನ್ನು ಮಾಡಿದವನು ಇವನು' ಎಂಬ ಅನಿಷ್ಟ ಹೇಳಿಕೆಯು ಅಭ್ಯಾಖ್ಯಾನ. ಕಲಹ (ಜಗಳ) ಅರ್ಥ ಎಲ್ಲರಿಗೂ ತಿಳಿದದ್ದು ; (ಪರಸ್ಪರ ದೂಷಣಾತ್ಮಕ ವಚನ

ಕಲಹ) ಬೆನ್ನಹಿಂದೆ ದೋಷದ ಪ್ರಕಟಣೆ ಮಾಡುವುದು ಪೈಶುನ್ಯ (ಚಾಡಿ) ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳಿಗೆ ಸಂಬಂಧಿಸಿರದ ವಚನ ಅಬದ್ಧ ಪ್ರಲಾಪ. ಶಬ್ದಮುಂತಾದ ವಿಷಯಗಳಲ್ಲಿ ರಾಗ–ಆಸಕ್ತಿ ಉಂಟುಮಾಡುವ ಮಾತು ರತಿವಚನ.ಅವುಗಳಲ್ಲಿ ಅರತಿ– ಅನಾಸಕ್ತಿಯುಂಟು ಮಾಡುವ ಮಾತು ಅರತಿವಚನ. ಪರಿಗ್ರಹದ ಅರ್ಜನ (ಸಂಪಾದನೆ) ರಕ್ಷಣೆ ಮುಂತಾದವುಗಳಲ್ಲಿ ತೊಡಗಿಸುವ ಮಾತು ಉಪಧಿ ವಚನ. ವಾಣಿಜ್ಯ ವ್ಯವಹಾರದಲ್ಲಿ ಮೋಸ– ವಂಚನೆಗಳಲ್ಲಿ ತೊಡಗಿಸುವಂತಹ ಮಾತು ನಿಕೃತಿವಚನ. ತಪಸ್ಸು ವಿಜ್ಞಾನಗಳಲ್ಲಿ ಹಿರಿಯರಾದವರಿಗೂ ಪ್ರಣಾಮ ಮಾಡದಿರುವುದಕ್ಕೆ ನಿಮಿತ್ತವಾಗುವ ಮಾತು ಅಪ್ರಣತಿ ವಚನ. ಕಳ್ಳತನದಲ್ಲಿ ತೊಡಗಿಸುವಂತಹ ಮಾತು ಮೋಷವಚನ. ಸನ್ಮಾರ್ಗೋಪದೇಶವಾದ ಮಾತು ಸಮ್ಯಗ್ ದರ್ಶನ ವಚನ. ಇದರ ವಿರುದ್ಧವಾಗಿ ಅಸತ್ಪ್ರವೃತ್ತಿಯುಂಟುಮಾಡುವ ಮಾತು ಮಿಥ್ಯಾದರ್ಶನ ವಚನ. ವಕ್ತಾರರೆಂದರೆ ಪ್ರಕಟವಾಗಿರುವ ವಕ್ತೃಪರ್ಯಾಯ ಹೊಂದಿದ ದ್ವೀಂದ್ರಿಯಾಗಳಾದ ಜೀವಿಗಳು. ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವಗಳ ಅಪೇಕ್ಷೆಯಿಂದ ಅಸತ್ಯವು ಅನೇಕ ಪ್ರಕಾಅರವಿದೆ. ಸತ್ಯ ಸದ್ಭಾವವು ನಾಮ ರೂಪ, ಸ್ಥಾಪನಾ, ಪ್ರತೀತ್ಯ, ಸಂವೃತಿ, ಸಂಯೋಜನಾ, ಜನಪದ, ದೇಶ, ಭಾವ ಮತ್ತು ಸಮಯ ಎಂಬ ಪ್ರಕಾರಗಳಿಂದ ಹತ್ತು ವಿಧವಾಗಿದೆ. ಇವುಗಳಲ್ಲಿ ಮೌಲಿಕ ಅರ್ಥವಿಲ್ಲದಿದ್ದಾಗ್ಯೂ ವ್ಯವಹಾರಕ್ಕಾಗಿ ಸಚೇತನ ಮತ್ತು ಅಚೇತನ ದ್ರವ್ಯಗಳಿಗೆ ಸಂಜ್ಞೆ ಕೊಡುವುದು (ಹೆಸರನ್ನು ಕೊಡುವುದು) ನಾಮಸತ್ಯ. ಉದಾಹರಣೆ: ಐಶ್ವರ್ಯ ಮುಂತಾದವನ್ನು ಹೊಂದಿಲ್ಲವದರೂ 'ಇಂದ್ರ' ಎಂಬ ಸಂಜ್ಞೆ ಕೊಡುವುದು. ಪದಾರ್ಥವಿಲ್ಲದಿದ್ದಾಗ್ಯೂ ರೂಪದ ಮುಖ್ಯತ್ವದಿಂದ ಹೇಳುವ ಮಾತು ರೂಪಸತ್ಯ, ಉದಾ: ಚಿತ್ರದಲ್ಲಿರುವ ವ್ಯಕ್ತಿಯಲ್ಲಿ ಚೈತನ್ಯೋಪಯೋಗಾದಿಗಳಿಲ್ಲದಿದ್ದರೂ 'ಅರ್ಥ ಪುರುಷ' ಎಂದು ಮುಂತಾಗಿ ಕರೆಯುವುದು. ಮೂಲ ಪದಾರ್ಥವಿಲ್ಲದಿದ್ದರೂ ಕಾರ್ಯನಿಮಿತ್ತ ದ್ಯೂತಸಂಬಂಧಿಯಾದ ಅಕ್ಷ ಮುಂತಾದವುಗಳಲ್ಲಿ (ಆನೆ, ಕುದುರೆ ಮೊದಲಾದವುಗಳ) ಸ್ಥಾಪನೆಯು ಸ್ಥಾಪನಾ ಸತ್ಯ. ಸಾದಿ, ಅನಾದಿ ರೂಪದ ಔಪಶಮಿಕಾದಿ ಭಾವಗಳನ್ನು ಕುರಿತ ವಚನವು ಪ್ರತೀತ್ಯಸತ್ಯ. ಸಂವೃತಿ, ಎಂದರೆ, ಗೋಚರಿಸದಿರುವಂತಹುದರ ಆಧಾರ ಹೊಂದಿದ ಮಾತು ಸಂವೃತಿ ಸತ್ಯವು. ಉದಾಹಾರಣೆಯಾಗಿ– ತಾವರೆಯ ಹುಟ್ಟಿಗೆ ಭೂಮಿಯೇ ಮೊದಲಾದ ಅನೇಕ

ಕಾರಣಗಳಿದ್ದರೂ ಪಂಕದಲ್ಲಿ (ಕೆಸರಿನಲ್ಲಿ) ಜ–ಹುಟ್ಟಿದ್ದು ಎಂಬಾಧಾರದಿಂದ ‘ಪಂಕಜ’ ಎನ್ನುವುದು, ‘ಧೂಪಚೂರ್ಣ’ವಾಸದ (ಸುಗಂಧದ್ರವ್ಯದ) ಅನುಲೇಪನ ಪ್ರಘಾರ್ಷ (ಉಜ್ಜುವುದು) ಮೊದಲಾದವುಗಳಲ್ಲಿ ಮತ್ತು ಪದ್ಮ. ಮಕರ. ಹಂಸ.ಸರ್ವತೋಭದ್ರ, ಕ್ರೌಂಚ ವ್ಯೂಹಗಳಲ್ಲಿ ಬೇರೆ ಬೇರೆ ದ್ರವ್ಯಗಳ ಅಗತ್ಯರೀತಿಯ ವಿಭಾಗ ವಿಧಿ–ಸನ್ನಿವೇಶಗಳ ಮೂಡಿಬರುವಂತಹುದನ್ನು ಹೇಳುವ ಮಾತು ಸಂಯೋ ಜನಾಸತ್ಯ. ಆರ್ಯ ಮತ್ತು ಅನಾರ್ಯ ಎಂಬ ಭೇದಗಳುಳ್ಳ ಮುವ್ವತ್ತೆರಡು ಜನಪದಗಳಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳನ್ನು ತಂದುಕೊಡುವ ಮಾತು ಜನಪದಸತ್ಯ. ಗ್ರಾಮ, ನಗರ, ರಾಜ, ಗಣ, ಪಾಖಂಡ, ಜಾತಿ ಮತ್ತು ಕುಲ ಮುಂತಾದುವುಗಳ ಧರ್ಮದ ಉಪದೇಶಕ ವಚನ, ದೇಶಸತ್ಯ. ಛದ್ಮಸ್ಥನಜ್ಞಾನಕ್ಕೆ ದ್ರವ್ಯದ ನಿಜರೂಪವು ಗೋಚರಿಸದಿದ್ದರೂ ಸಂಯತನಿಗೆ (ಮುನಿಗೆ) ಸಂಯತಾ ಸಂಯತನಿಗೆ (ಶ್ರಾವಕನಿಗೆ) ಅವರವರ ಗುಣಗಳ ಪರಿಪಾಲನೆಗಾಗಿ ಇದು ಪ್ರಾಸುಕದ್ರವ್ಯ ಇದು ಅಪ್ರಾಸುಕದ್ರವ್ಯ ಎಂದು ಮುಂತಾಗಿ ಹೇಳುವ ಮಾತು ಭಾವಸತ್ಯ. ಆಗಮಗಮ್ಯಗಳಾದ ಪ್ರತಿನಿಯತವಾದ ಆರು ಪ್ರಕಾರದ ದ್ರವ್ಯ ಮತ್ತು ಅವುಗಳ ಪರ್ಯಾಯಗಳ ನಿಜಸ್ವರೂಪವನ್ನು ಪ್ರಕಟಪಡಿಸುವ ಮಾತು ಸವಯ ಸತ್ಯ.

೭. ಆತ್ಮಪ್ರವಾದ (ಆದಪವಾದ) ಪೂರ್ವ– ಇದು ೧೬ ವಸ್ತುಗಳಲ್ಲಿ ೩೨೦ ಪಾಹುಡಗಳನ್ನೊಳಗೊಂಡು ೨೬,೦೦,೦೦,೦೦೦ ಪದಗಳಲ್ಲಿ ಜೀವನು ವೇತ್ತನು, (ತಿಳಿಯುವವನು) ವಿಷ್ಣುವು, ಭೋಕ್ತೃವು, ಬುದ್ಧನು ಈ ಮುಂತಾದರೀತಿಯಿಂದ ವರ್ಣಿಸುವುದು ೧೫. ಜೀವನು ಕರ್ತೃವು, ವಕ್ತೃವು, ಪ್ರಾಣೀಯು, ಭೋಕ್ಷವು, ಪುದ್ಗಲ ರೂಪನು, ವೇತ್ತೃವು (ತಿಳಿಯುವವನು), ವಿಷ್ಣುವು, ಸ್ವಯಂಭುವು, ಶರೀರಿಯು, ಮಾನವನು, ಸಕ್ತನು ಜಂತುವು, ಮಾನಿಯು, ಮಾಯಾವಿಯು ಯೋಗಿಯು, ಸಂಕುಡನು (ಸಂಕೋಚ ಹೊಂದುವವನು) ಅಸಂಕುಡನು (ಸಂಕೋಚಹೊಂದದವನು) ಕ್ಷೇತ್ರಜ್ಞನು ಹಾಗೂ ಅಂತರಾತ್ಮನು. ೧೫

ಇವುಗಳ ಅರ್ಥ–ಜೀವಿಸಿದ್ದಾನೆ, ಜೀವಿಸುವನು ಜೀವಿಸಿದ್ದನು ಎನ್ನುವುದರಿಂದ ಜೀವನೆಂದು ಕರೆಯಲ್ಪಡುವನು. ಶುಭ ಮತ್ತು ಅಶುಭ ಕರ್ಮಗಳನ್ನು ಮಾಡುವನಾದ್ದ ರಿಂದ (ಕರೇದಿತ್ರಿ) ಕರ್ತಾ, ಸತ್ಯ, ಅಸತ್ಯ ಒಳ್ಳೆಯ ಮತ್ತು ಕೆಟ್ಟ ಮಾತನ್ನು ಆಡುವವನು (ವದದಿ ಇತಿ) ವಕ್ತೃವು. ಇವನಿಗೆ

ಪ್ರಾಣಗಳಿವೆ ಎನ್ನುವುದರಿಂದ ಪ್ರಾಣೀ, ಅಮರ (ದೇವ), ನರ, ತಿರ್ಯಂಚ ಮತ್ತು ನಾರಕಿ ಎಂಬ ನಾಲ್ಕು ವಿಧದ ಸಂಸಾರದಲ್ಲಿ (ಕುಶಲ ಮತ್ತು ಅಕುಶಲ) ಪುಣ್ಯ ಮತ್ತು ಪಾಪ ಫಲಗಳನ್ನು ಅನುಭವಿಸುವನು (ಭುಂಜಿಸುವನು) ಎನ್ನುವುದರಿಂದ ಭೋಕ್ತೃವು. ಅನೇಕ ವಿಧದ ಶರೀರಗಳನ್ನು ಪಡೆದು ಸಮಚತುರಸ್ರ. ನ್ಯಗ್‌ರೋಧ ಪರಿಮಂಡಲ, ಸ್ವಾತಿ, ಕುಬ್ಜಕ, ಮಾಮನ ಮತ್ತು ಹುಂಡಕ ಎಂಬ ಆರು ಪ್ರಕಾರದ ಸಂಸ್ಥಾನವನ್ನು (ಪೂರದಿ) ಮತ್ತು ಗಲನ ಮಾಡುವವನು ಎನ್ನುವುದರಿಂದ ಪುದ್ಗಲನು; ಸುಖ ಮತ್ತು ದುಃಖಗಳನ್ನು ತಿಳಿಯುವನು (ವೇದನ ಮಾಡುವನು) ಎನ್ನುವುದರಿಂದ ವೇದನು. ಪ್ರಾಪ್ತವಾದ ಶರೀರದಲ್ಲಿ ವ್ಯಾಪಿಸುವನು ಎನ್ನುವುದರಿಂದ ವಿಷ್ಣುವು (ವ್ಯಪ್ನೋತಿ ಇತಿ ವಿಷ್ಣುಃ) ಸ್ವತಃ ತಾನೇ ಉತ್ಪನ್ನನಾಗುವನು (ಭೂತವಾನ್) ಎನ್ನುವುದರಿಂದ ಸ್ವಯಂಭುವು (ಸಂಸಾರಾ ವಸ್ಥೆಯಲ್ಲಿ) ಇವನಿಗೆ ಶರೀರವಿರುವುದು ಎನ್ನುವುದರಿಂದ ಶರೀರಯು. ಮನು ಎಂದರೆ ಜ್ಞಾನ, ಅದರಲ್ಲಿ ಉತ್ಪನ್ನನಾಗಿರುವನು ಎನ್ನುವುದರಿಂದ ಮಾನವನು. ಸ್ವಜನ ಸಂಬಂಧ, ಮಿತ್ರವರ್ಗವೇ ಮುಂತಾದವುಗಳಲ್ಲಿ ಆಸಕ್ತಿ ಹೊಂದುವನು ಎನ್ನುವುದರಿಂದ ಸಕ್ತನು. ನಾಲ್ಕು ಪ್ರಕಾರದ ಗತಿಗಳುಳ್ಳ ಸಂಸಾರದಲ್ಲಿ ಜನಿಸುವನು ಮತ್ತು ಜನನ ಉಂಟುಮಾಡುವನು ಎನ್ನುವುದರಿಂದ ಜಂತುವು. ಇವನಿಗೆ ಮಾನ(ಅಹಂಕಾರ)ವಿದೆ ಎನ್ನುವುದರಿಂದ ಮಾನಿ. ಮಾಯೆ ಇದೆ ಎನ್ನುವುದರಿಂದ ಮಾಯೀ.ಯೋಗವಿದೆ ಎನ್ನುವುದರಿಂದ ಯೋಗೀ. ಅತಿಸೂಕ್ಷ್ಮ ದೇಹಪ್ರಾಪ್ತಿಯಲ್ಲಿ ಸುಂಕುಚಿತನಾಗುವನು ಎನ್ನುವುದರಿಂದ ಸಂಕುಡನು. ಸರ್ವ ಲೋಕಾಕಾಶವನು ವ್ಯಾಪಿಸುವನು ಎನ್ನುವುದರಿಂದ ಅಸಂಕುಡನು. ಕ್ಷೇತ್ರವನ್ನು ಸ್ವಸ್ವರೂಪವನ್ನು ತಿಳಿಯುವನು (ಜಾನಾತಿ) ಎನ್ನುವುದರಿಂದ ಕ್ಷೇತ್ರಜ್ಞನು. ಅಷ್ಟಕರ್ಮಗಳೊಳಗಿರುವನು (ಅಭ್ಯಂತರನಾಗಿರುವನು) ಎನ್ನುವುದರಿಂದ ಅಂತರಾತ್ಮನು.

೮. ಕರ್ಮ(ಕಮ್ಮ) ಪ್ರವಾದಪೂರ್ವ– ಇದು ೨೦ ವಸ್ತುಗಳಲ್ಲಿ ೪೦೦ ಪಾಹುಡಗಳನ್ನೊಳಗೊಂಡು ೧೮೦೦೦೦೦೦ ಪದಗಳಲ್ಲಿ ವಿಧದ ಕರ್ಮವನ್ನು ವರ್ಣಿಸುವುದು. (ಧವಲಾ) ಬಂಧ, ಉದಯ, ಉಪಶಮ, ನಿರ್ಜರಾ ಪರ್ಯಾಯಗಳು ಅನುಭವ ಪ್ರದೇಶ

ಅಧಿಕರಣಗಳು ಜಘನ್ಯ, ಮಧ್ಯಮ, ಉತ್ಕೃಷ್ಟ ಪ್ರಕಾರದ ಸ್ಥಿತಿ– ಇವುಗಳನ್ನು ವರ್ಣಿಸುವುದು (ತ. ರಾ. ವಾ).

೯. ಪ್ರತ್ಯಖ್ಯಾನ (ಪಚ್ಚಕ್ಖಾಣ) ನಾಮಧೇಯಪೂರ್ವ– ಇದು ೩೦ ವಸ್ತುಗಳಲ್ಲಿ ೬೦೦ ಪಾಹುಡಗಳನ್ನೊಳಗೊಂಡು ೮೪೦೦೦೦೦ ಪದಗಳಲ್ಲಿ ದ್ರವ್ಯ, ಭಾವ ಪ್ರಕಾರದ ಪರಿಮಿತಕಾಲ ಅಪರಿಮಿತಕಾಲ ಪ್ರಕಾರದ ಪ್ರತ್ಯಾಖ್ಯಾನ, ಉಪವಾಸವಿಧಿ, ಪಂಚ ಸಮಿತಿ ತ್ರಿಗುಪ್ತಿಗಳನ್ನೂ ಪ್ರರೂಪಿಸುವುದು (ಧವಲಾ). ವ್ರತ– ನಿಯಮ– ಪ್ರತಿಕ್ರಮಣ– ಪ್ರತಿಲೇಖನ– ತಪ – ಕಲ್ಪೋಪಸರ್ಗಾಚಾರ– ಪ್ರತಿಮಾ ಆರಾಧನಾ ವಿಶುದ್ಧಿ ಉಪಕ್ರಮಗಳು ಶ್ರಾಮಣ್ಯ ಕಾರಣವನ್ನೂ, ಪರಿಮಿತ ಅಪರಿಮಿತ ದ್ರವ್ಯಭಾವ ಪ್ರತ್ಯಾಖ್ಯಾನವನ್ನೂ ನಿರೂಪಿಸುವುದು (ತ. ರಾ. ವಾ)

೧೦. ವಿದ್ಯಾನುವಾದ (ವಿಜ್ಜಾಣುವಾದ)ಪೂರ್ವ–ಇದು ೧೫ ವಸ್ತುಗಳಲ್ಲಿ ೩೦೦ ಪಾಹುಡಗಳನ್ನೊಳಗೊಂಡು ೧೧೦೦೦೦೦೦ ಪದಗಳಲ್ಲಿ ಅಂಗುಷ್ಠಪ್ರಸೇನಾದಿಯಾದ ಏಳುನೂರು (೭೦೦) ಅಲ್ಪಿವಿದ್ಯೆಗಳ, ರೋಹಣ್ಯಾದಿಯಾದಿ ಐದುನೂರು (೫೦೦) ಮಹಾವಿದ್ಯೆಗಳ ಹಾಗೂ ಅಂತರಿಕ್ಷ, ಭೌಮ, ಅಂಗ, ಸ್ವರ, ಸ್ವಪ್ನ, ಲಕ್ಷಣ, ಮ್ಯಂಜನ ಮತ್ತು ಚಿಹ್ನ ಎಂಬ ಮಹಾ ನಿಮಿತ್ತಗಳನ್ನೂ ಹೇಳುವುದು (ಧವಲಾ) ಸಮಸ್ತ ವಿದ್ಯೆಗಳು ಎಂಟು ಮಹಾನಿಮಿತ್ತಗಳು, ಅವುಗಳ ವಿಷಯವಾದ ಲೋಕ, ರಜ್ಜುರಾಶಿ ವಿಧಿ, ಕ್ಷೇತ್ರ, ಶ್ರೇಣಿ, ಲೋಕಪ್ರತಿಷ್ಠಾಸಂಸ್ಥಾನ ಹಾಗೂ ಸಮುದ್ಘಾತದ ನಿರೂಪಣೆಯಿದೆ. ಕ್ಷೇತ್ರವೆಂದರೆ ಆಕಾಶ, ಪಟಸೂತ್ರದಂತೆ ಅಥವಾ ಚರ್ಮಾವಯವದಂತೆ ಆನುಪೂರ್ವಿಯಿಂದ ಊರ್ಧ್ವ (ಮೇಲೆ)–ಅಧಃ (ಕೆಳಗೆ)–ತಿರ್ಯಾಕ್, (ಅಡ್ಡಡ್ಡಲಾಗಿ) ವ್ಯವಸ್ಥಿತವಾದ ಅಸಂಖ್ಯಾತ ಆಕಾಶ ಪ್ರದೇಶ ಪಂಕ್ತಿಗಳು, ಶ್ರೇಣಿಗಳು, ಹೇಳುಲ್ಪಟ್ಟಿವೆ (ತ. ರಾ.ವಾ).

೧೧. ಕಲ್ಯಾಣ (ಕಲ್ಲಾಣ)ನಾಮಧೇಯಪೂರ್ವ–ಇದು ೧೦ ವಸ್ತುಗಳಲ್ಲಿ ೨೦೦ ಪಾಹುಡಗಳನ್ನೊಳಗೊಂಡು ೨೬೦೦೦೦೦೦೦ ಪದಗಳಲ್ಲಿ ಸೂರ್ಯ, ಚಂದ್ರ, ನಕ್ಷತ್ರ ಮತ್ತು ತಾರಾಗಣಗಳ ಚಾರ, ಉಪಪಾದ, ಗತಿ ವಿಪರ್ಯಯ (ವಕ್ರಗತಿ)ಗಳ ಫಲಗಳು ಹಕ್ಕಿಗಳ ಧ್ವನಿ

ಮತ್ತು ಅರಿಹಂತ, ಬಲದೇವ, ವಾಸುದೇವ, ಚಕ್ರಧರ ಮುಂತಾದವರ ಗರ್ಭಾವತರಣ ಮೊದಲಾದ ಕಲ್ಯಾಣಗಳನ್ನು ನಿರೂಪಿಸುವುದು.

೧೨.ಪ್ರಾಣಾವಾಯಪೂರ್ವ– ಇದು ೧೦ ವಸ್ತುಗಳಲ್ಲಿ ೨೦೦ ಪಾಹುಡಗಳನ್ನೊಳಗೊಂಡು ೧೩೦೦೦೦೦೦ ಪದಗಳಲ್ಲಿ ಕಾಯ ಚಿಕಿತ್ಸೆ ಮುಂತಾದ ಅಷ್ಟಾಂಗ ಆಯುರ್ವೇದ ಭೂತಿಕರ್ಮ, ಶರೀರರಕ್ಷಣೆಗಾಗಿ ಮಾಡುವ ಭಸ್ಮಲೇಪನ, ಸೂತ್ರ ಬಂಧನಾದಿ ಕರ್ಮ, ಜಾಂಗುಲಿಕ ಪ್ರಕ್ರಮ (ವಿಷವಿದ್ಯೆ) ಪ್ರಾಣಾಪಾನ ವಿಭಾಗವನ್ನು ವಿಸ್ತಾರವಾಗಿ ವರ್ಣೀಸುವುದು.

೧೩. ಕ್ರಿಯಾವಿಶಾಲಪೂರ್ವ– ಇದು ೧೦ ವಸ್ತುಗಳಲ್ಲಿ ೨೦೦ ಪಾಹುಡಾಗಳನ್ನೊಳಗೊಂಡು ೯೦೦೦೦೦೦೦ ಪದಗಳಲ್ಲಿ ಲೇಖನಕಲಾ ಆದಿ ಎಪ್ಪತ್ತೆರಡು ಕಲೆಗಳು, ಸ್ತ್ರೀ ಸಂಬಂಧಿಯಾದ ಅರವತ್ತುನಾಲ್ಕು ಗುಣಗಳು, ಶಿಲ್ಪಗಳು, ಕಾವ್ಯ ಗುಣದೋಷ ಕ್ರಿಯೆ ಛಂದೋವಿಚಿತಿಕ್ರಿಯೆಗಳನ್ನು (ಕ್ರಿಯಾಫಲದ ಉಪಭೋಕ್ತೃಗಳನ್ನು ತ. ರಾ. ವಾ) ವರ್ಣಿಸುವುದು.

೧೪. ಲೋಕಬಿಂದುಯಸಾರಪೂರ್ವ– ಇದು ೧೦ ವಸ್ತುಗಳಲ್ಲಿ ೨೦೦ ಪಾಹುಡಗಳನ್ನೊಳಗೊಂಡು ೧೨೫೦೦೦೦೦೦ ಪದಗಳಲ್ಲಿ ಎಂಟು ಪ್ರಕಾರದ ವ್ಯವಹಾರಗಳು. ನಾಲ್ಕು ಪ್ರಕಾರದ ಬೀಜಗಳು ( ಪರಿಕರ್ಮ, ರಾಶಿಕ್ರಿಯಾ ವಿಭಾಗ ತ. ರಾ. ವಾ.) ಮೋಕ್ಷಗಮನ ಕ್ರಿಯೆಗಳು ಮತ್ತು ಮೋಕ್ಷಸುಖವನ್ನು ವರ್ಣಿಸುವುದು.

ಕೋಟೀ ಶತಂ ದ್ವಾದಶ ಚೈವ ಕೋಟ್ಯೋ ಲಕ್ಷಾಣ್ಯಶೀತ ತ್ರ್ಯಧಿಕಾನಿ ಚೈವ।

ಪಂಚಾಶದಷ್ಟಾ ಚ ಸಹಸ್ರಸಂಖ್ಯಮೇತಚುತಂ ಪಂಚಪದಂ ನಮಾಮಿ॥

ಒಂದುನೂರಹನ್ನೆರಡುಕೋಟಿ ಎಂಭತ್ತಮೂರು ಲಕ್ಷ ಐವತ್ತೆಂಟು ಸಾವಿರದ ಮೇಲೆ ಐದು ಪದಗಳುಳ್ಳ ಈ ಶ್ರುತವನ್ನು ನಮಸ್ಕರಿಸುವೆನು.

ಜಿನೇಂದ್ರ ವಕ್ತ್ರಪ್ರತಿನಿರ್ಗತಂ ವಚೋಯತೀಂದ್ರಭೂತಿ ಪ್ರಮುಖೈರ್ಗಣಾಧಿಪೈಃ।

ಶ್ರುತಂ ಧೃತಂ ತೈಶ್ಚ ಪುನಃ ಪ್ರಕಾಶಿತಂ ದ್ವಿಷಟ್ಪ್ರಕಾರಂ ಪ್ರಣಮಾಮಹಂ ಶ್ರುತಂ॥

ಜಿನೇಂದ್ರನ ಮುಖದಿಂದ ಹೊರಮುಡಿದ ವಚನವು ಯತಿಗಳಾದ ಇಂದ್ರಭೂತಿ ಪ್ರಮುಖ ಗಣಧರರಿಂದ ಕೇಳಲ್ಪಟ್ಟ, ಧಾರಣ ಮಾಡಲ್ಪಟ್ಟ (ನೆನಪಿನಲ್ಲಿ ಅವರು ಧರಿಸಿದ) ಮತ್ತು ಪ್ರಕಾಶಿಸಲ್ಪಟ್ಟ ಆ ಹನ್ನೆರಡು ಭೇದದ (ದ್ವಾದಶಾಂಗ) ಶ್ರುತವನ್ನು ನಮಸ್ಕರಿಸುತ್ತೇನೆ.

ಶ್ರುತವು ಪೌರುಷೇಯವೆ ? ಅಪೌರುಷೇಯವೆ ? ಎಂಬ ಪ್ರಶ್ನೆಯಿದೆ. ಪೌರುಷೇಯವೆಂದರೆ ಪುರುಷನಿಂದ ಮೂಡಿದ್ದು ಅಥವಾ ಪುರುಷನಿಂದಾದ ರಚನೆ ಎಂದರ್ಥ; ಹಾಗಲ್ಲವಾದದ್ದು ಅಪೌರುಷೇಯ. ವೇದಗಳು ಅಪೌರುಷೇಯ, ಅವು ಯಾರಿಂದಲೂ ರಚಿತವಾದುವಲ್ಲ. ಈಶ್ವರನಿಂದಲೂ ರಚಿತವಾದುವಲ್ಲ, ಆದ್ದರಿಂದ ಅವು ಪ್ರಾಮಾಣ್ಯಗಳು, 'ತತ್ತ್ವನಿರ್ಣಯದಲ್ಲಿ ಅಂತಿಮನಿರ್ಣಾಯಕಗಳು' ಎಂಬುದು ಮೀಮಾಂಸಾ ದಾರ್ಶನಿಕರ ಮತ. ಈ ಬಗ್ಗೆ ಜೈನ ದಾರ್ಶನಿಕ ಮತವೇನೆಂಬುದನ್ನು ತಿಳಿಯಬೇಕು: ಜೀವ ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಎಂಬ ಆರು ದ್ರವ್ಯಗಳ ಘಟಕ ಈ ಲೋಕ. ಈ ಆರು ದ್ರವ್ಯಗಳು ಅನಾದ್ಯನಿಧನ– ಆದಿ ಮತ್ತು ಅಂತ್ಯವಿಲ್ಲದವು, ಎಂದರೆ ಶಾಶ್ವತವಾದವು. ಇವುಗಳ ಸ್ವರೂಪ  ತಿಳಿಯುವ ಮತ್ತು ಬೋಧಿಸುವ ಪ್ರಕ್ರಿಯೆಯೂ ಅನಾದ್ಯನಂತವಾದುದು. ಈ ಪ್ರಕ್ರಿಯೆಯಲ್ಲಿ ಶ್ರುತವು ಅಂತರ್ಗವಗಿದೆ. ಆದ್ದರಿಂದ ಶ್ರುತವು ಅನಾದ್ಯನಂತವಾದುದು. ಅನಾದ್ಯನಂತ ಎಂಬ ಈ ಅಭಿಮತವು ೧೬ ದ್ರವ್ಯಾದಿ ಸಾಮಾನ್ಯಾಪೇಕ್ಷೆಯುಳ್ಳದ್ದಾಗಿದೆ; ದ್ರವ್ಯಕ್ಷೇತ್ರ–ಕಾಲ– ಭಾವಗಳ ವಿಶೇಷಗಳನ್ನು ಗಣನೆಗೆ ತಂದುಕೊಳ್ಳದೆ ಹೇಳುವುದಾದಲ್ಲಿ ಶ್ರುತವು 'ಅನಾದ್ಯನಿಧನ' ಎನ್ನಿಸುವುದು.  ಇದು ದ್ರವ್ಯ– ಯಾರೋ ಒಬ್ಬ ಪುರುಷನಿಂದ, ಕ್ಷೇತ್ರ–ಯಾವುದೋ ಒಂದೆಡೆಯಲ್ಲಿ, ಕಾಲ– ಯಾವಾಗಲೋ ಒಮ್ಮೆ, ಭಾವ–ಯಾವುದೋ ಒಂದು ಭಾವರೂಪದಿಂದ ತಿಳಿಯಲ್ಪಟ್ಟದ್ದಾಗಿಲ್ಲ. ಇನ್ನು ಇದೇ ದ್ರವ್ಯ–ಕ್ಷೇತ್ರ –ಕಾಲ–ಭಾವಗಳ ವಿಶೇಷದ ವಿವಕ್ಷೆ ಎಂದರೆ ಅಪೇಕ್ಷೆಯಿಂದ ಶ್ರುತಕ್ಕೆ ಆದ್ಯಂತವಿದೆ, ಉದಾಹರಣೆಯಾಗಿ ಒಂದು ಬೀಜ ಮತ್ತು ಅಂಕುರವನ್ನು ಗಣನೆಗೆ ತಂದುಕೊಂಡಲ್ಲಿ, ಬೀಜ ಆದಿ ಮತ್ತು ಅಂಕುರ ಅಂತ್ಯವೆನಿಸುವುವಾಗಿ ಆದ್ಯಂತಗಳನ್ನು ಕಾಣಬಹುದು. ಆದರೆ ಬೀಜ ಮತ್ತು ಅಂಕುರಗಳ ಸಂತಾನದ್ರುಷ್ಟಿಯಿಂದ ಅನಾದ್ಯನಿಧನವೆನಿಸುವುದು. ಇದೇ ರೀತಿಯಾಗಿ ಶ್ರುತವೂ ಒಂದು ದೃಷ್ಟಿಯಿಂದ ಆದ್ಯಂತವುಳ್ಳದ್ದಾಗಿದೆಯಾದರೆ ಮತ್ತೊಂದು ದೃಷ್ಟಿಯಿಂದ

ಅನಾದ್ಯನಿಧನವಾದುದಾಗಿದೆ. ನಿತ್ಯವಾದ ವೇದವು ಯಾರೊಬ್ಬರಿಂದಲೂ ರಚಿತವಾಗದಿದ್ದು ಋಷಿಗಳು ಅದರ ದ್ರಷ್ಟಾರಮಾತ್ರರಾಗಿರುವುದರಿಂದ ಅಪೌರುಷೇಯವೆನಿಸುವಂತೆ ನಿತ್ಯವಾದ ಶ್ರುತವೂ ಯಾರೊಬ್ಬರಿಂದ ರಚಿತವಾದದ್ದಲ್ಲ. ಆದರೆ ಕೇವಲಜ್ಞಾನಿಗಳಿಗೆ ಗೋಚರಿಸುವುದು ಅಷ್ಟೆ. ಆದುದರಿಂದ ಅದು ಅಪೌರುಷೇಯವೆನಿಸುವುದು. ಶ್ರುತವು ಕೇವಲಜ್ಞಾನಿಯೊಬ್ಬನಿಗೆ ಗೋಚರಿಸಿ ಅವನು ಅದನ್ನು ಬೋಧಿಸುವವನಾದ್ದರಿಂದ ಅದು ಪೌರುಷೇಯವೂ ಆಗುವುದು. ೧೭ ಇನ್ನು ಅಪೌರುಷೇಯ ಎನ್ನುವುದು ಪ್ರಾಮಾಣ್ಯ ಕಾರಣವೆಂದೇನೂ ಹೇಳುವಂತಿಲ್ಲ ; ಏಕೆಂದರೆ ಚೋರಶಾಸ್ತ್ರವೇ ಮುಂತಾದುವು ಯಾವ ಪುರುಷನಿಂದ ರಚಿತವಾಗಿವೆ ಎಂಬುದರ ನೆನೆಪಿಲ್ಲವಾದ್ದರಿಂದ ಅವು ಅಪೌರುಷೇಯವೆನಿಸಿ ಪ್ರಾಮಾಣ್ಯವೆನಿಸಿಬಿಡುವುವು. ಇದಲ್ಲದೆ ಅನಿತ್ಯವಾಗಿರುವ ಪ್ರತ್ಯಕ್ಷಾದಿ ಪ್ರಮಾಣಗಳು ಪ್ರಾಮಾಣ್ಯವಲ್ಲವೆಂದೇನೂ ಹೇಳುವಂತಿಲ್ಲ. ಆದ್ದರಿಂದ ಒಂದು ದೃಷ್ಟಿಯಿಂದ ನಿತ್ಯ ಮತ್ತು ಅಪೌರುಷೇಯವೂ ಮತ್ತೊಂದು ದೃಷ್ಟಿಯಿಂದ ಅನಿತ್ಯ ಮತ್ತು ಪೌರುಷೇಯವೂ ಎನ್ನಿಸಿಕೊಳ್ಳುವ ಶ್ರುತವು ಪ್ರಾಮಾಣ್ಯವೆನಿಸಲಾರದೆಂದೇನೂ ಹೇಳುವಂತಿಲ್ಲ.

ಟಿಪ್ಪಣಿಗಳು

೧. ತತ್ವಾರ್ಥಸೂತ್ರ ವ್ಯಾಖ್ಯಾನಗಳಾದ ಸರ್ವಾರ್ಥಸಿದ್ಧಿ ಮತ್ತು ರಾಜವಾರ್ತಿಕಗಳಲ್ಲಿ ಈ ವಿವರಣೆಯಿದೆ. ವೀರಸೇನಾಚಾರ್ಯರ ಧವಲಾಟೀಕೆಯಲ್ಲಿ (ಷ. ಆ. ಜೀ. ಸ್ಥಾನಚೂಲಿಕಾ– ಪುಸ್ತಕ ೬. ಪು. ೩೨) "ಜ್ಞಾನೋತ್ಪಾದಕ ಪ್ರಯತ್ನದೊಡನೆ ಸಂಬಂಧವುಳ್ಳ ಸ್ವಸಂವೇದನವು. ಎಂದರೆ ಆತ್ಮ ವಿಷಯಕ ಉಪಯೋಗವು 'ದರ್ಶನ' ಎಂದು ಹೇಳಿದೆ".

೨. ತತ್ವಾರ್ಥ (ರಾಜ) ವಾರ್ತಿಕ. ಅ. ೧. ಸೂ. ೨೦ರ ವ್ಯಾಖ್ಯಾನ ಪರಿಚ್ಛೇದ –೧೪. 'ಧವಲಾ' ದಲ್ಲಿ ಇದರ ೧೪ ಪ್ರಕಾರಗಳನ್ನು ಹೇಳಿದೆ. (ಪು. ೯೬)

೩. ತ. ರಾ. ವಾ. ಅ. ೧. ಸೂ. ೨೦. ಪರಿಚ್ಛೇದ ೧೨.

೪. ಕಥಂ ಚರೇ ಕಥಂ ಚಿಟ್ಠೇ ಕಥಮಾಸೇ ಕಥಮ ಸಏ।
ಕಥಂ ಭುಂಜೇಜ್ಜ ಭಾಸೇಜ್ಜ ಕಥಂ ಪಾವಂ ಣ ಬಜ್ಝ ಈ ॥೭೦॥

ಜದಮ ಚರೇ ಜದಂ ಚಿಟ್ಠೇ ಜದಮಾಸೇ ಜದಂ ಸಏ।

ಜದಂ ಭುಂಜೇಜ್ಜ ಭಸೇಜ್ಜ ಏವಂ ಪಾವಂ ಣ ಬಜ್ಝಈ ॥೭೧॥

(ಛಕ್ಖಂಡಾಗಮ– ಜೀವಟ್ಠಾಣ, ಪು. ೯೯)

೫. ಏಕ್ಕೋ ಚೇವ ಮಹಪ್ಪೋ ಸೋ ದುವಿಯಪ್ಪೋ ತಿಲಕ್ಖಣೋ ಭಣಿಓ।

ಚದುಸಂಕಮಣಾಜುತ್ತೋ ಪಂಚಗ್ಗ ಗುಣಪಹಾಣೋಯ ॥೭೨॥

ಛಕ್ಕಾವಕ್ಕಮಜುತ್ತೋ ಕಮಜುತ್ತೋ ಕಮಸೋ ಸೋ ಸತ್ತಭಂಗಿಸಬ್ಭಾವೋ।

ಅಟ್ಠಾಸವೋಣವಟ್ಠೋ ಜೀವೋ ದಸಠಾಣಿಯೋ ಭಣಿಯೋ ॥೭೩॥

(ಪೀ. ಸೂ. ಛ. ಜೀ. ಪು. ೧೦೦)

೬. ದಂಗಸಣ– ವದ– ಸಾಮಾಇಯ– ಪೋಸಹ–ಸಚಿತ್ತ– ರಾಇಭತ್ತೇ ಯ।

ಬಹ್ಮ– ಆರಂಭ–ಪರಿಗ್ಗಹ– ಅಣುಮಣ– ಉದಿಟ್ಠ–ದೇಸವಿರದೋ ಯ ॥೭೪॥

(ಪೂ. ಸೂ. ಛ. ಜೀ. ಪು. ೧೦೨)

೭. ಆಕ್ಷೇಪಣೀಂ ತತ್ತ್ವ ವಿಧಾನಭೂತಾಂ ವಿಕ್ಷೇಪಣೀಂ ತತ್ತ್ವದಿಗಂತ ಶುದ್ಧಿಂ ।

ಸಂವೇಗಿನೀಂ ಧರ್ಮಫಲಪ್ರಪಂಚಾಂ ನಿರ್ವೇಗಿನೀಂ ಚಾಹ ಕಥಾಂ ವಿರಾಗಾಂ ॥೭೫॥

(ಪೂ,ಸೂಚಿಸಿದ್ದು. ಪು. ೧೦೬)

೮. ಧವಲಾದ ಹಿಂದೀ ಅನುವಾದದಲ್ಲಿ 'ಭವ್ಯಾಸಿದ್ಧಿ ಮತ್ತು ಅಭವ್ಯಾಸಿದ್ಧ' ಎಂದು ಹೇಳಿದೆ

(ಪೂ. ಸೂ. ಪು. ೧೧೦–೧೧೧)

೯ ಇದು ಧವಲಾದ ಹಿಂದೀ ಅನುವಾದ ಭಾಗ, (ಪೂ, ಸೂ. ಪು. ೧೧೧)

೧೦ ತತ್ತ್ವಾರ್ಥ (ರಾಜ) ವಾರ್ತಿಕ. ಸೂ. ೨೦/೧ರ ವ್ಯಾಖ್ಯಾನ (ಪರಿಚ್ಛೇದ ೧೨. ಪು. ೭೪)

೧೧ ಛಕ್ಖಂಡಾಗಮ–ಜೀವಟ್ಠಾಣ– ಸತ್ಪ್ರರೂಪಣಾ ಪು. ೧೧೪–೧೧೫

೧೨ ತ (ರಾ) ವಾ.ಸೂ೨೦/೧ ರ ವ್ಯಾಖ್ಯಾನ. ಪು ೭೪–೭೫

೧೩ (ತ. ರಾ. ವಾ.) ಪು.೭೫ ಇಲ್ಲಿ 'ಛದ್ಮಸ್ಥ ಕೇವಲಿ ನಾಂ' ಎಂದಿದೆ. ಇದು 'ಛದ್ಮಸ್ಥರಾದ ಕೇವಲಿಗಳು' ಎಂದು ಅರ್ಥ ಕೊಡುವುದು. ಆದರೆ ಭಗವಾನ್ ಮಹಾವೀರನ ಗರ್ಭಾವತರಣಾದಿ ಕಲ್ಯಾಣಗಳ ಕಾಲಗಳನ್ನು ಹೇಳುವಲ್ಲಿ ದೀಕ್ಷೆಯ ಅನಂತರದಲ್ಲಿ ಕೇವಲಜ್ಞಾನವು ಆವಿರ್ಭಾವವಾಗುವ ಮಧ್ಯವರ್ತಿ ಕಾಲವನ್ನು ಛದ್ಮಸ್ಥ ಕಾಲವೆಂದೂ, ಅದರ ಅನಂತರದ ಕಾಲವನ್ನು ಕೇವಲಿ–ಕಾಲವೆಂದೂ ಹೇಳಿದೆ. ಮೇಲಾಗಿ 'ಛದ್ಮ' ಎಂದರೆ ಕರ್ಮ ಎಂದರ್ಥ. ಇದನ್ನು ಘಾತಿಕರ್ಮವೆಂದೇ ತಿಳಿಯಬೇಕು ಈ ಪರ್ಯಾಲೋಚನೆಯಂತೆ ಕೇವಲಿಗಳು ಕೇವಲಜ್ಞಾನವನ್ನು ಪಡೆಯುವುದಕ್ಕಿಂತ ಹಿಂದಿನದಾದ ತಪಸ್ವಿ ಅವಸ್ಥೆಯನ್ನು ಇಲ್ಲಿ 'ಛದ್ಮಸ್ಥ ಕೇವಲಿ' ಎಂದು ಹೇಳಿರಬಹುದಾದ ಸಂಭವವಿದೆ. ಆದರೆ ಇದ್ರ ನಿಶ್ಚಿತವಾದ ಅರ್ಥ ಆಗಮದ ಹೇಳಿಕೆಯ ಆಧಾರದಿಂದಲೇ ಆಗಬೇಕಾಗಿದೆ.

೧೪. ಅಕ್ಷಾಸ್ಥಾನಾನಿ ವರ್ಣಾನಾಂ ಉರಃ ಕಂಠಃ ಶಿರಃ ತಥಾ।
ಜಿಹ್ವಾ। ಮೂಲಂ ಚ ದಂತಾಃ ಚ ನಾಸಿಕ ಓಷ್ಠೌ ಚ ತಾಲು ಚ॥

೧೫ ಜೀವೋ ಕತ್ತಾಯ ವತ್ತಾಯ ಪಾಣೀಭೋತ್ತಾಯ ಪೊಗ್ಗಲೋ।
ವೇದೋ ವಿಣ್ಹೂ ಸಯಂಭೂಯ ಸರೀರೀ ತಹ ಮಾಣವೋ ॥೮೧॥
ಸತ್ತಾ ಜಂತೂ ಯ ಮಾಣೀಯ ಮಾಈ ಜೋಗೀ ಯ ಸಂಕಡೋ।
ಅಸಂಕಡೋ ಯ ಚಿತ್ತಣ್ಹೂ ಅಂತರಪ್ಪಾ ತಹೇವ ಯ ॥ ೮೨ ॥

೧೬ ಸರ್ವಾರ್ಥಸಿದ್ಧಿ ಪೂ. ೨೦/೧ ವ್ಯಾಖ್ಯಾನ.

೧೭ ಸರ್ವಾರ್ಥಸಿದ್ಧಿ. ಪೂ. ೨೦/೧ ರ ವ್ಯಾಖ್ಯಾನ.